ಅಧ್ಯಕ್ಷರು :- ಇದು ಮುಗಿದ ಮೇಲೆ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ. ರಾತ್ರಿ 8 ಅಥವಾ 9 ಗಂಟೆಯಾಗಲಿ, ಅವುಗಳನ್ನು ತೆಗೆದುಕೊಳ್ಳೋಣ.

5. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ :- ರಾಜ್ಯದ ಬಳ್ಳಾರಿ ಹಾಗೂ ಇತರ ಪ್ರದೇಶಗಳಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ ಮತ್ತು ಗಡಿ ಒತ್ತುವರಿ ಪ್ರಕರಣಗಳನ್ನು ತನಿಖೆಗೆ ಒಳಪಡಿಸಿ, ರಾಜ್ಯದ ಸಂಪತ್ತನ್ನು ರಕ್ಷಿಸಿ, ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕೆಂಬ ವಿಚಾರದ ಬಗ್ಗೆ ಮುಂದುವರೆದ ಚರ್ಚೆ

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :- ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಅಕ್ರಮ ಗಣಿಗಾರಿಕೆಯ ಬಗ್ಗೆ ಸಾಕಷ್ಟು ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ವಿಶೇಷವಾಗಿ ನಮ್ಮ ಉಪನಾಯಕರು, ಮಾಜಿ ಮುಖ್ಯ ಮಂತ್ರಿಗಳಾದ ಕುಮಾರಸ್ವಾಮಿಯವರು, ರೇವಣ್ಣನವರು, ನಮ್ಮ ಪಕ್ಷದ ಅನೇಕ ನಾಯಕರು ಮತ್ತು ಆ ಕಡೆಯವರೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಹಾಗಾಗಿ, ಪುನ: ನಾನು ಹೆಚ್ಚಿಗೆ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಲೋಕಾಯುಕ್ತರ ವರದಿ ಪ್ರಕಾರ ಸರ್ಕಾರ ಏನು ಕ್ರಮವನ್ನು ಜರುಗಿಸಬೇಕಾಗಿತ್ತೋ, ಆ ಕ್ರಮಗಳನ್ನು ಇನ್ನೂ ಜರುಗಿಸಿಲ್ಲ, ಇದು ಮೊದಲನೆಯದು. ಎರಡನೆಯದಾಗಿ, ಏನು ಅಕ್ರಮ ಗಣಿಗಾರಿಕೆ ಇನ್ನೂ ನಡೆದಿದೆ ಮತ್ತು ಲೋಕಾಯುಕ್ತರ ರಿಪೋರ್ಟ್‌ನಲ್ಲಿ ಏನು ವರದಿಯಾಗಿದೆ ಅದರ ಪ್ರಕಾರ, ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸತಕ್ಕಂಥ ಕೆಲಸ ತಕ್ಷಣವೇ ಆಗಬೇಕಾಗಿತ್ತು. ಅದೂ ಕೂಡ ಆಗುತ್ತಿಲ್ಲ. ಆದರೆ ಆಶ್ಚರ್ಯ ಏನೆಂದರೆ, ಈ ಅಕ್ರಮ ಗಣಿಗಾರಿಕೆಯ ಬಗ್ಗೆ ನಾವು ಮಾತನಾಡುವಾಗ, ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಮಧ್ಯದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಅದೇ ರೀತಿ, ಜನಾರ್ಧನ ರೆಡ್ಡಿಯವರು ಮತ್ತು ಕರುಣಾಕರ ರೆಡ್ಡಿಯವರು, ಆ ಭಾಗದಲ್ಲಿರತಕ್ಕಂಥ ಕೆಲವು ಸಚಿವರು ಮತ್ತು ಮುಖಂಡರೂ ಕೂಡ ಪ್ರಸ್ತಾಪ ಮಾಡಿದರು.

(ಈ ಹಂತದಲ್ಲಿ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಪದೇ ಪದೇ ಅವರು ಮಾಡಿದಂಥ ಪ್ರಸ್ತಾಪಗಳನ್ನು ಮತ್ತು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಂಥ ಉತ್ತರವನ್ನು ನೋಡಿದರೆ ಬಹುಶಃ ಅವರ ಮನಸ್ಸಿನಲ್ಲಿ ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸುವುದಕ್ಕಿಂತಲೂ ಹೆಚ್ಚಾಗಿ ಯಾವ ಯಾವ ಕಾಲದಲ್ಲಿ ಏನೇನಾಯಿತು, ಯಾರ್ಯಾರು ಏನೇನು ಮಾಡಿದ್ದಾರೆ ಎನ್ನುವ ಬಗ್ಗೆ ಹೆಸರುಗಳನ್ನು ಪ್ರಸ್ತಾಪ ಮಾಡಿ, ಯಾರ್ಯಾರ ಕಾಲದಲ್ಲಿ ಯಾರ್ಯಾರಿಗೆ ಎಷ್ಟೆಷ್ಟು ಜಮೀನುಗಳನ್ನು ಗಣಿಗಾರಿಕೆ ಮಾಡುವುದಕ್ಕೆ ಕೊಟ್ಟಿದ್ದಾರೆ ಎನ್ನುವ ಹೆಸರುಗಳನ್ನು ಹೇಳಿ ಹೆದರಿಸತಕ್ಕಂಥ ಪ್ರಯತ್ನ ನಡೆಯಿತು ಎಂದರೆ ತಪ್ಪಾಗಲಾರದು. ಧರಂಸಿಂಗ್‌ರವರ ಹೆಸರನ್ನು ತೆಗೆದುಕೊಂಡ ತಕ್ಷಣವೇ ಇದು ಕಾಂಗ್ರೆಸ್ಸಿನದು ಎಂದು ಹೇಳಿ ಕಾಂಗ್ರೆಸ್ಸಿನವರು ಹೆದರುತ್ತಾರೆ ಎಂದು ಅವರು ತಿಳಿದುಕೊಂಡಿದ್ದಾರೆ. ಧರಂಸಿಂಗ್‌ರವರದ್ದು ಇರಲಿ, ಕುಮಾರಸ್ವಾಮಿಯವರದ್ದು ಇರಲಿ, ನಿಮ್ಮದಿರಲಿ ಅಥವಾ ಈ ಹಿಂದೆ ಎಸ್.ಎಂ.ಕೃಷ್ಣರವರ ಆಡಳಿತ ಕಾಲದಲ್ಲಿ ನಡೆದಂಥಾದ್ದು ಇರಲಿ. ನಿಮಗೆ ಧೈರ್ಯ ಇದ್ದರೆ, ಇದನ್ನು ಸೀದಾ C.B.I.ಗೆ refer ಮಾಡಿ. ಈ ವರದಿಯನ್ನೂ ಕೂಡ ಅವರಿಗೆ ಕಳುಹಿಸಿ. ಇದನ್ನು ನಾವು demand ಮಾಡುತ್ತೇವೆ. ಮತ್ತೇನೂ ಬೇಕಾಗಿಲ್ಲ. ಅದು ಯಾರೇ ಇರಲಿ, refer ಮಾಡಿ. ಅದರ ಪದೇಪದೇ ಹೆಸರುಗಳನ್ನು ಹೇಳಿ, ಧರಂಸಿಂಗ್‌ರವರ ಕಾಲದಲ್ಲಿ 400 ಎಕರೆ ಕೊಟ್ಟರು, ಗೌರ್ನರ್ ಕೊಟ್ಟರು ಎಂದು ಹೇಳುತ್ತೀರಿ. ಯಾರು ಕೊಟ್ಟರು? ನಿಮಗೆ ತಾಕತ್ತಿದ್ದರೆ ನಿಲ್ಲಿಸಿ. ಕೇಂದ್ರ ಸರ್ಕಾರಕ್ಕೆ ಹೋಗಿ ಅದನ್ನು ನಿಲ್ಲಿಸಿ ಎಂದು ಹೇಳುವುದಲ್ಲ. ನನಗೆ ಈ ಸದನದಲ್ಲಿ ಮಾತನಾಡತಕ್ಕಂಥ ಹಕ್ಕಿದೆ. ಅದಕ್ಕಾಗಿ ನಾನು ನಿಮ್ಮನ್ನು ಕೇಳುತ್ತಿದ್ದೇನೆ. ನನ್ನನ್ನು ದೆಹಲಿಗೆ ಕಳುಹಿಸಿದ್ದರೆ, ಬೇಕಿದ್ದರೆ ಅಲ್ಲಿಗೂ ಹೋಗಿ ಹೇಳುತ್ತಿದ್ದೆ. ಆದರೆ ಹಾಗೆ ಇಲ್ಲವಲ್ಲ, ನಾನು ಶಾಸಕ, ನೀವು ಮುಖ್ಯಮಂತ್ರಿಗಳು. ನಾನು ಇವತ್ತು ಕೇಳುತ್ತೇನೆ, ತಾವು ಇವರ ಹೆಸರುಗಳನ್ನು ಹೇಳಿ ನಿಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುವಂಥಾದ್ದು ಸಾಧ್ಯವಿಲ್ಲ. ಅಥವಾ, ಇವರ ಹೆಸರು ಹೇಳಿದ್ದಾರೆ ಎಂದು ಹೇಳಿ ನಾವು ಹೆದರತಕ್ಕಂಥಾದ್ದೂ ಕೂಡ ಇಲ್ಲ. ನಾವು ಎಲ್ಲದಕ್ಕೂ ತಯಾರಿದ್ದೇವೆ. C.B.I. enquiry ಮಾಡಿ ಎಂದು ಏಕೆ ನಾನು ನಿಮ್ಮನ್ನು ಕೇಳುತ್ತಿದ್ದೇನೆಂದರೆ, C.B.I. enquiry ಮಾಡುವುದರಿಂದ ಒಂದು ನಿಷ್ಪಕ್ಷಪಾತವಾದ ತನಿಖೆ ನಡೆಯುತ್ತದೆ. Illegal mining ಯಾರು ಮಾಡುತ್ತಾರೆ, ಅದೂ ಬರಲಿ ಮತ್ತು ಕಾನೂನು ಬಾಹಿರವಾಗಿ ಯಾರೇ ಕೊಟ್ಟಿದ್ದರೂ ಕೂಡ, C.B.I. ನವರು ಇದು ತಪ್ಪು, ಕಾನೂನು ಬಾಹಿರವಾಗಿ ಕೊಟ್ಟಿದ್ದಾರೆ, ಇವರು

ಬರೀ recommendation ಮಾಡುವ authority ಆಗಿದ್ದರು, ಕೇಂದ್ರ ಸರ್ಕಾರದ recommendation ಇಲ್ಲದೇ ಇವರು ಗಣಿಗಾರಿಕೆ ಮಾಡುವುದಕ್ಕೆ ಪ್ರಸ್ತಾವನೆ ಕೊಟ್ಟು ಅವರಿಗೆ allow ಮಾಡಿದ್ದಾರೆ ಎನ್ನತಕ್ಕಂಥಾದ್ದು ಏನೇ C.B.I.ನವರಿಂದ ಬರಲಿ, ಹಾಗೆ ಬಂದರೆ ಆ ಶಿಕ್ಷೆಗೆ ಅವರೆಲ್ಲರೂ ಕೂಡ ಒಳಪಡುತ್ತಾರೆ. ನಾವೆಲ್ಲರೂ ಕೂಡ ಅದನ್ನು ಸ್ವಾಗತಿಸೋಣ. ಆದರೆ ಅದನ್ನು ಬಿಟ್ಟು ಇವತ್ತು ತಾವು ಏನು ಪ್ರಸ್ತಾಪ ಮಾಡುತ್ತಿದ್ದೀರಿ ಎಂದರೆ, ಪದೇಪದೇ ಈ 3-4 ಹೆಸರುಗಳನ್ನು ಹೇಳುತ್ತಿದ್ದೀರಿ. ಇದು hit and run ರೀತಿ ಆಗುತ್ತಿದೆ.

ಕೆಲವು ಕಡೆ ಏನಾಗುತ್ತದೆಂದರೆ, ತಾವು ವಕೀಲರು ತಮಗೆ ಗೊತ್ತಿದೆ. ಅದರಲ್ಲಿಯೂ ವಿಶೇಷವಾಗಿ ಬೆಂಗಳೂರಿನಂಥ ನಗರದಲ್ಲಿ ಕೆಲವರು chain ಕದಿಯುವವರು, ಪಾಕೆಟ್ ಹೊಡೆಯುವವರು ಏನು ಮಾಡುತ್ತಾರೆಂದರೆ, Motor Cycle ಅನ್ನು ಭರ್ ಎಂದು ಸೌಂಡ್ ಮಾಡಿ ಚೈನ್ ಕಿತ್ತುಕೊಳ್ಳುವುದು, ಓಡುವುದು ಮಾಡುತ್ತಾರೆ. ಇಲ್ಲ, ಯಾರಿಗಾದರೂ ಹೊಡೆಯಬೇಕಾದರೆ, ಸೈಕಲ್ ಮೇಲೆ ಕುಳಿತು ಫಟಕ್ಕನೆ ಹೊಡೆದು ಓಡಿಹೋಗುತ್ತಾರೆ. ಅದಕ್ಕೆ Hit and Run ಎಂದು ಹೇಳುತ್ತಾರೆ. ಹೊಡೆಯುವುದು, ಓಡಿಹೋಗುವುದು, ನಂತರ, ಕೈಗೆ ಸಿಗುವುದಿಲ್ಲ. ಹಾಗೆ, ಇವರು ಹೊಡೆಯುವುದು, ಸುಮ್ಮನೆ ಕುಳಿತುಕೊಳ್ಳುವುದು. ಏನಾದರೂ ಹೇಳಿಕೊಳ್ಳಲಿ. ಈ ರೀತಿಯಾಗಿ ಮಾಡಿದರೆ, ಆ ರೀತಿಯಾಗಿ ಹೆದರಿಸಿದರೆ ಯಾರೂ ಹೆದರುವುದಿಲ್ಲ. ಇಲ್ಲಿ ಒಬ್ಬರಿಗೊಬ್ಬರಿಗೆ ಹೆದರಿಸುವ ಪ್ರಶ್ನೆಯಿಲ್ಲ. Illegal ಗಣಿಗಾರಿಕೆಯನ್ನು ನಿಲ್ಲಿಸತಕ್ಕಂಥದ್ದು ಹೇಗೆ ಮತ್ತು ಇದರಲ್ಲಿ ದುಡ್ಡು ಮಾಡಿದವರಾರು? ಯಾವ್ಯಾವ ರೀತಿಯಾಗಿ ಮಾಡುತ್ತಾರೆನ್ನತಕ್ಕಂಥದ್ದನ್ನು ನೋಡಬೇಕು. ಕೆಲವು ಜನರು legally ಮಾಡುತ್ತಿರಬಹುದು. ಆ ರೀತಿ legally ಮಾಡಿಸಿಕೊಳ್ಳತಕ್ಕಂಥ ಅನೇಕ ವಿಧಾನಗಳಿರುತ್ತವೆ. ತಮಗೆ ಗೊತ್ತಿದೆ, ಅನೇಕ ಜನ black money ಯನ್ನು white ಆಗಿ ಹೇಗೆ convert ಮಾಡಿಕೊಳ್ಳುತ್ತಾರೆ ಅಥವಾ ಬೇರೆ ಬೇರೆ ರೀತಿಯಾಗಿ ಹೇಗೆ ಗಳಿಸುತ್ತಾರೆಂಬುದು ಎಲ್ಲರಿಗೂ ಗೊತ್ತು. ತಾವು ವಕೀಲರಾಗಿದ್ದೀರಿ, ಅಲ್ಲಿ Income Tax practitionersಗೆ ಗೊತ್ತಿರುತ್ತದೆ. Auditor ಗೆ ಗೊತ್ತಿರುತ್ತದೆ, ಎಲ್ಲರಿಗೂ ಗೊತ್ತಿರುತ್ತದೆ. ಅದನ್ನೇ ಒಂದು ದೊಡ್ಡದಾಗಿ ನಾವು ತಿಳಿದುಕೊಂಡು, ಇವತ್ತಿನ ದಿವಸ ಅಲ್ಲೇನೂ ನಡೆದಿಲ್ಲವೆಂದು ಕಣ್ಣು ಮುಚ್ಚಿಕೊಂಡು ಕುಳಿತರೆ, ಇದು ನಿಜವಾಗಿಯೂ ನಾವು ನಮ್ಮ ರಾಜ್ಯಕ್ಕೆ ದೊಡ್ಡ ಅಪರಾಧ ಮಾಡುತ್ತಿದ್ದೇವೆ ಮತ್ತು ನಮ್ಮ ರಾಜ್ಯಕ್ಕೆ ನಿಜವಾಗಿಯೂ ದ್ರೋಹ

ಮಾಡುತ್ತಿದ್ದೇವೆ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆಬಯಸುತ್ತೇನೆ. ಯಾರ್ಯಾರ ಕಾಲದಲ್ಲಿ ಯಾರಿಗೆ ಕೊಟ್ಟಿದ್ದಾರೆ ಅಥವಾ refer ಮಾಡಿದ್ದಾರೆನ್ನತಕ್ಕಂಥದ್ದು ಎಂದು ಕೆಲವು ಜನ ಹೇಳಿದರು. ದೊಡ್ಡದಾಗಿ ಈ ಹಗರಣಗಳನ್ನು ಹೊರಗೆ ತೆಗೆಯಬೇಕು ಅಥವಾ ಲೋಕಾಯುಕ್ತದವರು ಪ್ರಸ್ತಾಪ ಮಾಡಿದಂಥ ವಿಚಾರಗಳನ್ನು ನಾವು ಪ್ರಸ್ತಾಪ ಮಾಡಬೇಕೆಂದರೆ, ದೊಡ್ಡದಾಗಿ 3-4 ಹೆಸರುಗಳನ್ನು ಹೇಳಿ ಉಳಿದ ಹೆಸರುಗಳನ್ನು ಬಿಟ್ಟು, ಅವರು ಯಾರದೋ ಬಿಡಲಿ, ಹಿಡಿಯಲಿ. ಆದರೆ, ನೀವು ಒಂದು ಮಾತನ್ನು ನೆನಪಿನಲ್ಲಿಟ್ಟುಕೊಳ್ಳಬೇಕು, 2004ರ ಹಿಂದೆ ಗಣಿಗಾರಿಕೆ ನಡೆದಿತ್ತು. ಅದೇನು ಇವತ್ತು ನಡೆದಿದ್ದೇ? ಆದರೆ, ಗಣಿಗಾರಿಕೆ licence ಅನ್ನು ಬ್ರಿಟಿಷರ ಕಾಲದಿಂದ ಕೊಡುತ್ತಿದ್ದರು. ನೀವು 50 ವರ್ಷ ಮಲಗಿದ್ದೀರೇನು ಎಂದು ಕೆಲವರು ಕೇಳಿದರು. ನೀವು 32 ವರ್ಷ ಏನು ಮಾಡಿದಿರಿ ಎಂದು ಕೇಳಿದರು. ಸಮಸ್ಯೆ ಬಂದಾಗ ಎಲ್ಲರೂ ಆ ಕಡೆಗೆ ಕಣ್ಣು ಹಾಯಿಸುತ್ತಾರೆ. ಸಮಸ್ಯೆ ಇಲ್ಲವೆಂದರೆ ಯಾರೂ ಕೂಡ ಆ ಕಡೆಗೆ ನೋಡುವುದಕ್ಕೆ ಹೋಗುವುದಿಲ್ಲ. 30 ವರ್ಷ ಯಾರೂ ಕೂಡ ಮೂಸಿ ನೋಡುವವರು ಇರಲಿಲ್ಲ. 2004ರಲ್ಲೇ ಅದಕ್ಕೆ ಬೆಲೆ ಬಂತು ಎಂದು ನಿಮಗೂ ಕೂಡ ಗೊತ್ತಿದೆ. 2004ರಿಂದ ಇತ್ತೀಚೆಗೆ ಅದಕ್ಕೆ ಬೆಲೆ ಬಂದಾಗ ನಮಗೇನೋ ದೇವರ ಆಶೀರ್ವಾದ, ಅವರ ಆಶೀರ್ವಾದ, ಎಲ್ಲರ ಆಶೀರ್ವಾದದಿಂದ ಇವತ್ತು ನಾವು ಕೋಟ್ಯಂತರ ರೂಪಾಯಿಗಳನ್ನು ಗಳಿಸತಕ್ಕಂಥದ್ದನ್ನು ನಮ್ಮ ವ್ಯವಹಾರದಲ್ಲಿ ಮಾಡಿದ್ದೇವೆಂದು ಜನಾರ್ದನ ರೆಡ್ಡಿಯವರು ಹೇಳಿದರು. ಅದಕ್ಕೆ ಯಾರ ಅಭ್ಯಂತರವೂ ಇಲ್ಲ. ಕಾನೂನು ಪ್ರಕಾರ ಪ್ರಯತ್ನ ಮಾಡಿ, ನೀವೆಲ್ಲ ಕಷ್ಟಪಟ್ಟು ಮಾಡಿಕೊಳ್ಳಿ. ಆದರೆ, ನೀವು ಹೇಳುವುದೇ ಎಲ್ಲ ಸತ್ಯ, ಬೇರೆಯವರು ಹೇಳುವುದರಲ್ಲಿ ಏನೂ ಅರ್ಥವಿಲ್ಲ ಎಂದು ಹೇಳುವುದು ಸರಿಯಲ್ಲ. ನಿಮ್ಮ ಸರ್ಕಾರ 32 ವರ್ಷಗಳಿಂದ ಇತ್ತಲ್ಲ, ಏನು ಮಾಡಿತ್ತು ಎಂದು ಮುಖ್ಯಮಂತ್ರಿಯವರೂ ಹೇಳಿದರು. 32 ವರ್ಷಗಳ ಹಿಂದೆ, ಇವತ್ತು border area ದಲ್ಲಿ ಏನು ಗಣಿಗಾರಿಕೆ ನಡೆದಿದೆ ಇದು ಆವಾಗ ನಡೆದಿರಲಿಲ್ಲ ಅಥವಾ ಆವಾಗ ಈ ಸಮಸ್ಯೆ ಇರಲಿಲ್ಲ. ಆವಾಗ ಆ boundary ಯಲ್ಲಿರುವ ಕಲ್ಲುಗಳನ್ನು ಕಿತ್ತು ಬಿಸಾಕಿ iron ore ಯಾರೂ ತೆಗೆದುಕೊಂಡು ಹೋಗಿರಲಿಲ್ಲ ಅಥವಾ ಹೋಗುತ್ತಿರಲಿಲ್ಲ. ಸಂದರ್ಭ ಬಂದಾಗ ಮಾತ್ರ ಇದು. ನಿಮಗೆ ಗೊತ್ತಿರುವ ಹಾಗೆ, ಅನೇಕ ಸಾರಿ ಪಟ್ಟಾ ಲ್ಯಾಂಡ್, ಫಾರೆಸ್ಟ್ ಲ್ಯಾಂಡ್ ಎಲ್ಲಾ ಕಡೆ ಸುಮ್ಮನೆ ಅಲ್ಲಿ ಬಿದ್ದದ್ದನ್ನು ಜನ ಯಾರೂ ಕೂಡ ಕೇಳುತ್ತಿರಲಿಲ್ಲ. ಕೊನೆಗೆ ಏನಾಯಿತೆಂದರೆ, ಅವರವರ

ಜಮೀನುಗಳಲ್ಲಿರುವ ಮಣ್ಣನ್ನು ಕೂಡ ಮಾರಿಕೊಳ್ಳುವುದಕ್ಕೆ ಶುರು ಮಾಡಿದರು. ಅಂದರೆ, ಇದನ್ನು ಯಾರೂ ಕೇಳುವುದಿಲ್ಲವೆನ್ನತಕ್ಕ ಪರಿಸ್ಥಿತಿ ಇತ್ತು. Iron ore ಬಿದ್ದಿದ್ದರೂ ಅದನ್ನು ಇತ್ತೀಚೆಗೆ 3-4 ವರ್ಷಗಳಿಂದ ಎಲ್ಲರೂ ಮಾರಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದರು. ಆದರೆ, ಈ ಹಿಂದೆ ಇದಿರಲಿಲ್ಲ. ಘೋರ್ಪಡೆಯವರ ಹೆಸರನ್ನು ಪ್ರಸ್ತಾಪ ಮಾಡಿದರು. ಘೋರ್ಪಡೆಯುವರು ಲೀಸ್ ಅವೌಂಟ್ ಅನ್ನು ಕೊಡಲಿಕ್ಕಾಗಲಿಲ್ಲವೆಂದು ಹೆಚ್ಚೂ ಕಡಿಮೆ 10 Sq.k.m.ಜಾಗವನ್ನು surrender ಮಾಡಿದರು. ಅಂದರೆ, ಲೀಸ್ ಅಮೌಂಟ್ ಅನ್ನು ತುಂಬಲಿಕ್ಕೆ ಶಕ್ತಿ ಇರಲಿಲ್ಲವೆಂದು ಆ ಕಾಲದಲ್ಲಿ surrender ಮಾಡಿದರು. ಈಗ ಅವರ ಮಗನ ಹೆಸರು ಪ್ರಸ್ತಾಪ ಏಕೆ ಅಂದರೆ ಕಾಂಗ್ರೆಸ್‌ನವರು ಇದ್ದರು ಎಂದು. ಏನು ಘೋರ್ಪಡೆಯವರು ಬಂದು ಯಾರಿಗಾದರೂ telephone ಮಾಡಿ ಮಾಡಿ ಎಂದು ಹೇಳಿದ್ದಾರೆಯೇ? ಏಕೆಂದರೆ, ಯಾರ್‍ಯಾರ ಹೆಸರುಗಳನ್ನು ತೆಗೆದರೆ ಈ ಕಾಂಗ್ರೆಸ್ ಪಾರ್ಟಿಯ ತೇಜೋವಧೆಯಾಗುತ್ತದೆಯೋ ಅದನ್ನು ನೋಡಬೇಕೆನ್ನುವ ದೃಷ್ಟಿಯಿಂದ ನೀವು ಹೇಳುತ್ತಿದ್ದೀರಿ. Encroachment ಏನಾಗುತ್ತಿದೆ, illegal ಗಣಿಗಾರಿಕೆ ಏನು ಆಗುತ್ತಿದೆ, illegal transport ಏನಾಗುತ್ತಿದೆ ಇದನ್ನು ನಿಲ್ಲಿಸಿ ಈ ರಾಜ್ಯದ ಬೊಕ್ಕಸಕ್ಕೆ ಹಣ ತುಂಬುವಂಥದ್ದು ಒಂದು ಕಡೆ ಆಗಬೇಕು ಮತ್ತು iron ore ಇವತ್ತಿನ ದಿವಸ ಯಾವ್ಯಾವ ರೀತಿಯಲ್ಲಿ ಹೋಗುತ್ತಿದೆ ಅದನ್ನು ನಿಲ್ಲಿಸಬೇಕು ಎಂದು ಹೇಳುತ್ತಿದ್ದೇನೆ. Report ನಲ್ಲೇನಿದೆ? Report ನಲ್ಲಿ ಹೇಳಿದ್ದನ್ನು ನಾವ್ಯಾರೂ ನೋಡಲಿಲ್ಲ. ಅದರ ಬಗ್ಗೆ ಕಾಳಜಿ ಕೂಡ ವಹಿಸಲಿಲ್ಲ. ಇದನ್ನು ನೋಡಿಕೊಂಡು ನೀವು ಹಾಗೆ ಮಾಡಿದಿರಿ, ನಾವು ಹೀಗೆ ಮಾಡಿದೆವು ಎಂದು political ಉತ್ತರ ಕೊಡುತ್ತೀರಿ. ಇನ್ನೊಬ್ಬರು 150 ಕೋಟಿ ರೂ.ಗಳನ್ನು ನಿಮಗೆ ಕೊಟ್ಟಿದ್ದಕ್ಕೆ ನನ್ನ ಹತ್ತಿರ ದಾಖಲೆ ಇದೆ, prove ಮಾಡುತ್ತೇನೆಂದು ಹೇಳಿದರು. ಅದಕ್ಕೆ ನಾನು ನಿಮಗೆ request ಮಾಡುತ್ತೇನೆ, ಅವರ ಹತ್ತಿರ 150 ಕೋಟಿ ರೂ.ಗಳ ವಿಚಾರದ ಬಗ್ಗೆ ದಾಖಲೆ ಇದ್ದರೆ ಈ ಸದನದಲ್ಲಿ ಅದನ್ನು ಇಡಬೇಕು. ಏಕೆಂದರೆ, ಅದು ಈ ಸದನದ ಸ್ವತ್ತು. ಅವರು ಇಲ್ಲಿ ಅದನ್ನು ತೋರಿಸಿದ ಮೇಲೆ ನಮಗೆಲ್ಲ ಗೊತ್ತಾಗಬೇಕಲ್ಲವೇ? ನಾವೂ ಈ ಸದನದ ಸದಸ್ಯರಿದ್ದ ಮೇಲೆ ಅವರ ಹತ್ತಿರವಿರುವ proof ಅನ್ನು ನೋಡಬೇಕಲ್ಲವೇ? ಜನಾರ್ದನ ರೆಡ್ಡಿಯುವರು ಇಲ್ಲಿ ಇದನ್ನು ಪ್ರಸ್ತಾಪ ಮಾಡಿ, ನನ್ನ ಹತ್ತಿರ 150 ಕೋಟಿ ರೂಪಾಯಿಗಳ ಲಂಚವನ್ನು ತೆಗೆದುಕೊಂಡಿದ್ದಕ್ಕೆ proof ಇದೆ, ಬೇಕಾದರೆ

ನಿಮಗೆ ಕೊಡುತ್ತೇನೆ, ಸದನದ ಮುಂದೆ ಬೇಕಾದರೆ ಇಡುತ್ತೇನೆಂದು ಹೇಳಿದ್ದಾರೆ. ಅದಕ್ಕೆ ನಾನು request ಮಾಡುತ್ತೇನೆ, ಅವರೂ ಮಂತ್ರಿಯಾಗಿದ್ದಾರೆ, ದಯವಿಟ್ಟು, ಅವರ ಹತ್ತಿರವಿರುವ ಎಲ್ಲಾ ದಾಖಲೆಗಳನ್ನು ತರಿಸಿಕೊಳ್ಳಿ immediately. ಏಕೆಂದರೆ ಅದು ಈ ಸದನದ ಸ್ವತ್ತಾದರೆ ನಾವೆಲ್ಲರೂ ನೋಡುವುದಕ್ಕಾಗುತ್ತದೆ ಅಲ್ಲವೇ? ಇಡೀ ನಮ್ಮ ರಾಜ್ಯದ ಜನತೆಗೆ ಕೂಡ ಗೊತ್ತಾಗುತ್ತದೆ. ಇದು public document ಆಗಿ ನಿಮ್ಮಲ್ಲಿದ್ದರೆ ನಾವು ತೆಗೆದುಕೊಳ್ಳಬಹುದು. ಇಲ್ಲವೆಂದರೆ, ಅವರಲ್ಲಿ ಇದ್ದದ್ದೇನು ಎಂದು ನಮಗೆ ಗೊತ್ತಾಗುವುದಿಲ್ಲ. ಬಿಚ್ಚುತ್ತೇನೆಂದು ನೋಡು ಎಂದು ಅವರು ಹೇಳುವುದು, ನೀವು ಬಿಚ್ಚಿ ಎಂದು ಇವರು ಹೇಳುವುದು, ನಮಗೇನೂ ಗೊತ್ತಿಲ್ಲವಲ್ಲ, ಅವರು ಬಿಚ್ಚುವ ಹಾಗಿಲ್ಲ, ಇವರು ನೋಡುವ ಹಾಗಿಲ್ಲ. ಅದಕ್ಕಾಗಿ ದಯವಿಟ್ಟು ಆ ಎಲ್ಲಾ documents ಅನ್ನು ತಾವು ತರಿಸಿಕೊಳ್ಳಬೇಕು. ಏಕೆಂದರೆ, ಅವರು ಈ ಸದನದಲ್ಲಿ ಹೇಳಿದ್ದಾರೆ, ಅದಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆಯೇ ಹೊರತಾಗಿ ಸದನದಲ್ಲಿ ಅವರು ಹೇಳದೇ ಇದ್ದಿದ್ದರೆ ನಾನು ಕೇಳುತ್ತಿರಲಿಲ್ಲ. ಮೂರನೆಯದಾಗಿ, ಅನೇಕ ಕಡೆ mining lease ಗಳನ್ನು ಕೊಟ್ಟಿದ್ದಾರೆ. ಅವು illegal encroachment ಹೇಗೆ ಆಗುತ್ತವೆಂದರೆ, ಕೆಲವು ಸಲ forest ಜಮೀನಿನಲ್ಲಿ ಕೊಡುತ್ತಾರೆ ಅಥವಾ ಪಟ್ಟಾ ಲ್ಯಾಂಡ್‌ನಲ್ಲಿ ಕೊಡುತ್ತಾರೆ ಅಥವಾ ಗೋಮಾಳದಲ್ಲಿ ಕೊಡುತ್ತಾರೆ. ಅವು ನ್ಯಾಚುರಲಿ ನಿಮ್ಮ ಗಣಿಗಾರಿಕೆಯಲ್ಲಿ ಬರಲಿಲ್ಲವೆಂದರೆ, ಅವು illegal ಅಂಥ ಕಡೆ ತೆಗೆಯಬಾರದು ಎಂದು ಹೇಳುತ್ತಾರೆ. Licence holder ಯಾರಿಗೆ legal ಆಗಿ permit ಸಿಕ್ಕಿರುತ್ತದೆಯೋ, ಅಥವಾ legal ಆಗಿ lease ಸಿಕ್ಕಿರುತ್ತದೆಯೋ ಅವರೇನು ಮಾಡುತ್ತಾರೆಂದರೆ, ಇಂಥ ಭೂಮಿಗಳಿಂದ ತೆಗೆಯುವುದು, ಪಟ್ಟಾ, ಫಾರೆಸ್ಟ್ ಅಲ್ಲಿ ಇಲ್ಲಿ ತೆಗೆದು, ಇವರ ಲೀಸ್ ಜಾಗದಲ್ಲಿ 10 ಟನ್ ಮೈನ್ಸ್ ತೆಗೆದುಕೊಂಡರೆ, ಹೊರಗಡೆಯಿಂದ 20 ಟನ್‌ನಷ್ಟು ತೆಗೆದುಕೊಂಡು ಒಟ್ಟು 30 ಟನ್ ಮಾರಿಬಿಡುವುದು. ಆದರೆ, ಅಲ್ಲಿ actually ಅವರ ಗಣಿಗಳಿಂದ ಮತ್ತು ಅವರು ಪಡೆದಂಥ ಲೀಸ್‌ನಿಂದ ಬರುವುದು 5-10 ಟನ್ ಇದ್ದರೆ, ಉಳಿದ ಕಡೆಯಿಂದ ಎಲ್ಲ 50-60 ಟನ್‌ಗಳಷ್ಟು ತೆಗೆದುಕೊಂಡು ಮಾರಿಕೊಳ್ಳುವುದು. ಅದರಿಂದ ಬರುವ ಹಣ ಏನಿರುತ್ತದೆ, ಅದು ಯಾರಿಗೂ ಗೊತ್ತಾಗುವುದಿಲ್ಲ. ಗೊತ್ತಾಗುವಂಥದ್ದು, ಲೀಸ್ ಮೇಲೆ ತೆಗೆದುಕೊಂಡಿರುವಂಥದ್ದು ಅಥವಾ ಅವರ ಬಳಿಯಿಂದ ನ್ಯಾಯವಾಗಿ ಕೊಡತಕ್ಕಂಥದ್ದು. ಆದರೆ, ಹಾಕಿ ತಮ್ಮ regular lease ಮಾಡಿಕೊಂಡಂಥ ಇದರಿಂದಲೇ ಅಕೌಂಟ್‌ನಲ್ಲಿ ಹಾಕಿಕೊಂಡು ತೆಗೆದುಕೊಳ್ಳುತ್ತಾರೆ.

But actual material ಅಲ್ಲಿಂದ ಬರುವುದಿಲ್ಲ, ಬೇರೆ ಕಡೆಯಿಂದ ಬರುತ್ತದೆ. ಹೀಗೆ ಅದರಲ್ಲಿ illegal ಆಗಿ sale ಮಾಡತಕ್ಕಂಥದ್ದು ಮತ್ತು ತಮ್ಮಲ್ಲಿ ಅದನ್ನು ತೆಗೆದುಕೊಂಡು accumulate ಮಾಡಿಕೊಂಡು ಗಳಿಸತಕ್ಕಂಥದ್ದು. ಇನ್ನೊಂದು ಕಡೆ ಏನು ನಡೆದಿದೆ ಎಂದರೆ, ಪೊಲೀಸ್ ಸಪೋರ್ಟ್ ಎಂದು ಬೇಕಾದರೂ ಹೇಳಿ, ಸರ್ಕಾರದ ಸಪೋರ್ಟ್ ಎಂದು ಆದರೂ ಹೇಳಿ ಅಥವಾ ನಮ್ಮಂಥ ರಾಜಕಾರಣಿಗಳ ಸಪೋರ್ಟ್ ಎಂದು ಹೇಳಿ.

ಏನು ಮಾಡುವುದು? ಇಲ್ಲವೇ, ಯಾರು ಬಡವರು lease holders ಇದ್ದಾರೆ, ಅಥವಾ ಅವನಲ್ಲಿ ಏನೂ ಶಕ್ತಿ ಇರುವುದಿಲ್ಲ, resist ಮಾಡುವ capacity ಇಲ್ಲ, ಅವನನ್ನು ಹೆದರಿಸಿಕೊಂಡು ಅವನಿಂದ ತೆಗೆದುಕೊಳ್ಳುವುದು ಅಥವಾ ಅವನ lease ನಲ್ಲಿ enter ಆಗುವುದು, ಹೀಗೆ ಮಾಡುವುದು, ಅದೊಂದು ರೀತಿಯ exploitation. ಇದಕ್ಕೆ political power ಅಥವಾ man power ಯಾರಿಗಿದೆ ಅವರು ಇದನ್ನು exploit ಮಾಡತಕ್ಕಂಥ ಸಾಧ್ಯತೆ ಇದೆ. ಅದಕ್ಕಾಗಿ ಇವತ್ತಿನ ದಿವಸ ಲೋಕಾಯುಕ್ತರು forest ಬಗ್ಗೆ ಹೇಳಿದ್ದಾರೆ. 'Wherever the applications for grant of mining in forest area are made and feasibility report is prepared by Forest Department, same should be cross verified.' Cross verification ಮಾಡಿ ಎಂದು ಹೇಳಿದ್ದಾರೆ. ಅವರು ಮುಂದೆ ಈ ಮಾತು ಕೂಡ ಹೇಳಿದ್ದಾರೆ, 'In many cases where holder of mining lease or even others who do not have any mining lease indulge in mining in forest areas, the officials concerned have not taken any steps to prevent these illegal activities.' ಇದು ಹೇಳಿದ ಮೇಲೆ ಇದನ್ನು ನಿಲ್ಲಿಸಿದ್ದೀರಾ? ಹಿಂದಿನವರು ನಿಲ್ಲಿಸಲಿಲ್ಲ ಎಂದು ಇಟ್ಟುಕೊಳ್ಳಿ. ಈ ರಿಪೋರ್ಟ್ ಇವತ್ತು ನಿಮ್ಮ ಕೈಗೆ ಬಂದಿದೆ. ಯಾವ ದಿವಸ ನಿಮಗೆ ಈ ರಿಪೋರ್ಟ್ ಬಂದಿದೆ ಅಂದಿನಿಂದ ನಿಮ್ಮ ಅಧಿಕಾರಿಗಳು active ಆಗಿ ಮುಖ್ಯಮಂತ್ರಿಗಳು ಕೇಳಬಹುದು, ಸದನದಲ್ಲಿ ಈ ವಿಷಯ ಕೇಳುತ್ತಾರೆ, ನಾವು ಇದನ್ನು ನಿಲ್ಲಿಸಬೇಕು ಎಂದು ಹೇಳಿ ಇದನ್ನು ಏಕೆ ನಿಲ್ಲಿಸಲಿಲ್ಲ? ಇದನ್ನು

ನಿಲ್ಲಿಸುವುದಕ್ಕೆ ಏನಾದರೂ 3 ತಿಂಗಳು ಟೈಮ್ ಬೇಕೇ? ಯಾವ್ಯಾವ ದೃಷ್ಟಿ ಮಾಡಿಕೊಳ್ಳಬೇಕು? ನಿಮ್ಮ revenue ನಲ್ಲಿ ಲೀಕೇಜ್ ಇದೆಯೆಂದು ಗೊತ್ತಾದರೆ ತಕ್ಷಣ ಇದನ್ನು ತೆಗೆದುಕೊಳ್ಳುವುದು ಬಿಟ್ಟು ಮುಖ್ಯಮಂತ್ರಿಗಳು ಕಾನೂನು ಬಗ್ಗೆ ಹೇಳಿದರಲ್ಲಾ? ಯಾವುದೇ ಒಂದು ರಿಪೋರ್ಟ್ ಅನ್ನು submit ಮಾಡಿದರೆ ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ 3 ತಿಂಗಳ ಟೈಮ್ ಇರುತ್ತದೆ, ಅದಕ್ಕೆ ನಾವು 3 ತಿಂಗಳು ಕಾಯುತ್ತೇವೆ ಎಂದರೆ ಇನ್ನೂ 3 ತಿಂಗಳು ಕಾಯಿರಿ. ಅಲ್ಲಿಯವರೆಗೆ ಯಾರು ಏನೇನು ಮಾಡಿಕೊಳ್ಳಬೇಕೋ ಅದೆಲ್ಲ ಮಾಡಿಕೊಳ್ಳುತ್ತಾರೆ. ಲೋಕಾಯುಕ್ತರನ್ನು appoint ಮಾಡಿ ನೀವು ಅವರಿಂದ ರಿಪೋರ್ಟ್ ತರಿಸಿಕೊಂಡು ಅದನ್ನು ಅನುಷ್ಠಾನ ಮಾಡತಕಂಥದ್ದು ಎಲ್ಲಿಂದ ಬಂತು? ಅವರು ತಕ್ಷಣ ನಿಲ್ಲಿಸಿ ಎಂದು ಹೇಳುತ್ತಾರೆ. ತಾವು ನಿಲ್ಲಿಸಿದ್ದೀರಾ? ಇದಕ್ಕೆ ಉತ್ತರಿಸಬೇಕು. ಇದರ ಜೊತೆಯಲ್ಲಿ, 'This specially happens when the mining leases are granted near about the vicinity of the forest area though in such areas the law requires a buffer zone to be created between the forest boundary and the land.' ಅಂದರೆ, ಮೊದಲು ಕೊಟ್ಟಂಥ mining lease ಏನಿರುತ್ತದೆ ಅಥವಾ forest ಇವೆರಡರ ಏರಿಯಾ ದಲ್ಲಿ buffer zone ಅನ್ನು ಮಾಡಬೇಕು, ಮಧ್ಯದಲ್ಲಿ ಏನೂ ಕೊಡಬಾರದು ಎನ್ನುವುದಿದೆ. ಎಲ್ಲೆಲ್ಲಿ ಇದೆ ಎಂದು ನಿಮ್ಮ ಅಧಿಕಾರಿಗಳನ್ನು ತಕ್ಷಣ ಕಳುಹಿಸಿ ಅದನ್ನು ನಿಲ್ಲಿಸಿದ್ದೀರಾ? ಇದು ಮೂರನೇ ಪ್ರಶ್ನೆ. ಇನ್ನೊಂದು ವಿಷಯವೆಂದರೆ, ಅನೇಕ ಕಡೆಗಳಲ್ಲಿ stock yardಗಳಿವೆ. ಈ stock yard ಅನ್ನು ಯಾವ ರೀತಿ ದುರುಪಯೋಗವಾಗುತ್ತದೆ ಎಂದು ಲೋಕಾಯುಕ್ತರು ಹೇಳಿದ್ದಾರೆ. ಏನು ಹೇಳಿದ್ದಾರೆಂದರೆ, '...the examples of such stock yards which are contrary to the law. There is a need for examining licence already given to stock yards. If illegalities of such of those noticed by me in my report herein above are found, then the licence should be revoked and action should be initiated against the

concerned officers.' ಅಂದರೆ ಎಲ್ಲಿ stock-yard ಮಾಡುತ್ತಾರೆ mine ತಂದು ಹಾಕಿ ಅಲ್ಲಿಂದ ಏನು export ಮಾಡುತ್ತಾರೆ ಅಂಥ ಜಾಗದಲ್ಲಿ ನಿಮಗೆ illegal ಎಂದು ಕಂಡುಬಂದರೆ ಅದು ಕಾನೂನಿಗೆ ವಿರುದ್ಧವಾಗಿದ್ದರೆ ತಕ್ಷಣ ತಾವು ಆ licence ಅನ್ನು cancel ಮಾಡಬೇಕು ಅಥವಾ ಅದರ ಬಗ್ಗೆ review ಮಾಡಬೇಕೆಂದು ಹೇಳಿದ್ದಾರೆ. ನೀವು ಮಾಡಿದ್ದೀರಾ? ತದನಂತರ ವಿಶೇಷವಾಗಿ ಲಾರಿಗಳು excess ಆಗಿ carry ಮಾಡಿಕೊಂಡು ಹೋಗುತ್ತಿವೆ. ಇದು ಎಲ್ಲರಿಗೂ ಗೊತ್ತಿದೆ. ಹಿಂದಿನ ಕಾಲದಲ್ಲೂ ಆಗಿದೆ, ನಮ್ಮ ಕಾಲದಲ್ಲೂ ಇತ್ತು, ಈಗಲೂ ಇದೆ. ತಾವು ನೋಡಿದ ಹಾಗೆ National Highway ಗಳಲ್ಲಿ excess ಆಗಿ carry ಮಾಡಿಕೊಂಡು ಲಾರಿಗಳು ಹೋಗುತ್ತವೆ. ಲೋಕಾಯುಕ್ತರು ಇದನ್ನು ಹೇಳಿದ ಮೇಲೆ ಎಷ್ಟರಮಟ್ಟಿಗೆ ಚುರುಕಾಗಿ ನಿಮ್ಮ ಅಧಿಕಾರಿಗಳು ಇದನ್ನು initiative ಆಗಿ ತೆಗೆದುಕೊಂಡು ನಿಲ್ಲಿಸಿದ್ದಾರೆ? ನಿಲ್ಲಿಸಲಿಲ್ಲ ಎಂದರೆ, ಇದಕ್ಕೆ ಯಾರು ಕಾರಣ? ಯಾವ administration ಕಾರಣ? ನಾವು ಬೇರೆ ಸರ್ಕಾರಕ್ಕೆ ಕೇಳುವುದಕ್ಕೆ ಆಗುತ್ತದೆಯೇ? ನೀವು ಮುಖ್ಯಮಂತ್ರಿಗಳು. ನಿಮ್ಮ ಅಧೀನದಲ್ಲಿ Mines and Geology Department ಬರುತ್ತದೆ ಮತ್ತು ನೀವೇ ಇದನ್ನು ನಿಲ್ಲಿಸಬೇಕಾಗುತ್ತದೆ. ಹಿಂದಿನವರು ಏಕೆ ನಿಲ್ಲಿಸಲಿಲ್ಲವೆಂದರೆ ಹಿಂದಿನವರು ನಿಲ್ಲಿಸಲಿಲ್ಲ. ಸರಿ. ಜನ ಅವರಿಗೆ ಶಿಕ್ಷೆ ಕೊಟ್ಟರು. ಜನ ನಿಮ್ಮನ್ನು ಬಹಳ ಅದ್ದೂರಿಯಾಗಿ ತಂದರಲ್ಲಾ. ನೀವು ಅವರಿಗಿಂತ better ಎನ್ನುವ administration ಕೊಡಲಿಲ್ಲ. ನೀವು ಅವರಿಗಿಂತ worst administration ಕೊಟ್ಟಿರಿ ಹೊರತಾಗಿ ನೀವು ಯಾವುದೇ ರೀತಿಯಿಂದ ಇದನ್ನು ತಡೆಗಟ್ಟುವ ಪ್ರಯತ್ನ ಮಾಡಲಿಲ್ಲ. ಇವತ್ತು ಲೋಕಾಯುಕ್ತರು ಹೇಳಿದಂಥ ಸಲಹೆಗಳನ್ನು, ಮಾತುಗಳನ್ನು ಒಂದೂ ಕೂಡ ನೀವು ಅನುಷ್ಠಾನಕ್ಕೆ ತರಲಿಲ್ಲ. ಇನ್ನೊಂದು ವಿಶೇಷವಾಗಿ ನಿಮಗೆ ಹೇಳಬೇಕಾದರೆ, Transport permits ಯಾವ ರೀತಿಯಾಗಿ misuse ಆಗುತ್ತದ ಎನ್ನುವ ಬಗ್ಗೆ ಕೂಡ ಅವರು ಹೇಳಿದ್ದಾರೆ, ಅದರಲ್ಲಿ ಏನು ಹೇಳಿದ್ದಾರೆಂದರೆ, 'The normal practice in regard to the forest permit is that a signed and sealed booklet containing 52 to 100 permits leaving all the columns blank are issued in advance to the transporter.'

Blank ಕೊಟ್ಟುಬಿಡುವುದು without the name of the mining lease holder. ನಾನು ಅದಕ್ಕೇ ಹೇಳಿದೆ, ಬೇರೆಯವರದು ತೆಗೆದುಕೊಂಡು ಏಕೆ ಮಾಡುತ್ತಾರೆಂದರೆ ಅಲ್ಲಿ ತಮ್ಮ ಹೆಸರು ಹಾಕಿಕೊಳ್ಳುತ್ತಾರೆ. Illegal ಆಗಿ collect ಮಾಡುವುದು. ಹೊರಗಡೆಯಿಂದ ತಂದಿದ್ದು, ಹೊಲದಿಂದ ತಂದಿದ್ದು, ಅವನದೋ, ಇವನದೋ, ಹೆದರಿಸಿಯೋ, ಬೆದರಿಸಿಯೋ ತೆಗೆದುಕೊಂಡು ಅಷ್ಟೂ ಜಮಾ ಮಾಡಿಕೊಂಡು ಹೋಗುವುದು.'Quantity of the mineral being transported and vehicle number etc., being mentioned. There are various means by which this permit can be misused and being misused.' ಇದಕ್ಕೆ ಯಾರೂ ಉತ್ತರ ಕೊಡಲಿಲ್ಲ. ಬೇರೆ ಬೇರೆ ಮಾತು ಬಂದವು ಹೊರತಾಗಿ, ಲೋಕಾಯುಕ್ತರು ಹೇಳಿದ್ದು, blank permits without the vehicle number, owner ಬಗ್ಗೆ ಮಾಹಿತಿ ಇಲ್ಲದರ ಬಗ್ಗೆ ಲೋಕಾಯುಕ್ತರು ಏನು ಹೇಳಿದ್ದಾರೆ, ಅದರ ಬಗ್ಗೆ ಯಾವುದೇ ಚಿಂತನೆ ಇಲ್ಲ. ಇವತ್ತಿನ ದಿವಸ ಆ ಕೆಲಸ ನಡೆದಿದೆ. ಅದು ಹೋಗುವುದು ಎಷ್ಟು? ಯಾರು? ಯಾರಿಂದ ಎನ್ನುವ ಬಗ್ಗೆ ಸರ್ಕಾರ ಕಾಳಜಿ ವಹಿಸಲಿಲ್ಲ. ಕೇವಲ illegal mining ಅಥವಾ illegal permits, ಹಿಂದೆ ನಡೆದಿದೆ, ಈಗ ನಡೆದಿಲ್ಲ ಎನ್ನುವುದಲ್ಲ. ಈಗಲೂ ನಡೆದಿದೆ ಎನ್ನುವುದೇ ಈ ರಿಪೋರ್ಟ್‌ನಲ್ಲಿರುವುದು. ಇವತ್ತು ಅದನ್ನು ನಿಲ್ಲಿಸುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ? ನಿಮ್ಮ ಪ್ರಯತ್ನದಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದ್ದೀರಿ? ಹಿಂದಿನ ಸರ್ಕಾರ ಎಂದರೂ ಕೂಡ ನೀವೇ ಅದರ partner. ಏಕೋ ಮರೆತು ಹೋಗಿದ್ದೀರಿ. ಅವರು Chief Minister ಆಗಿದ್ದರು, ನೀವು Deputy Chief Minister ಆಗಿದ್ದಿರಿ. ನೀವು ಇಲ್ಲ ಎಂದು ಹೇಳಿದರೂ ಕೂಡ ನೀವು ಇದ್ದದು ಹೌದು ಎನ್ನುವುದು ಸರಿ. ಏಕೆಂದರೆ, cabinet ಎಂದರೆ ಒಂದೇ. ಒಳ್ಳೆಯದಾಗಿದ್ದೆಲ್ಲ ನನ್ನದು, ಕೆಟ್ಟದ್ದಾಗಿದ್ದೆಲ್ಲ ಕುಮಾರಸ್ವಾಮಿಯವರದು ಎಂದರೆ ಹೇಗೆ? ನೀವಿಬ್ಬರೂ ಸೈಕಲ್ ಕೊಟ್ಟಿರಿ, ಆ ಯಶಸ್ಸನ್ನು ನೀವಿಬ್ಬರೂ ಹಂಚಿಕೊಳ್ಳಬೇಕು, ಒಬ್ಬರಿಂದ ಹಿಂದೆ ಒಬ್ಬರು ಮುಂದೆ ಕುಳಿತುಕೊಳ್ಳಬೇಕು. ಬೇರೆ ಬೇರೆ ಏನೇನು ಕೆಲಸ ಮಾಡಿದ್ದೀರಿ ಅದನ್ನೂ ಕೂಡ ಇಬ್ಬರೂ ಹಂಚಿಕೊಳ್ಳಬೇಕಲ್ಲವೇ? ಕೆಟ್ಟದ್ದು ಮಾತ್ರ ನೀವು ತೆಗೆದುಕೊಳ್ಳಿ, ಒಳ್ಳೆಯದೆಲ್ಲ ನನಗಿರಲಿ ಎಂದು ಹೇಳಿದರೆ ಹೇಗೆ? 20

ತಿಂಗಳ ಆಡಳಿತವನ್ನು ಇಬ್ಬರೂ ಮಾಡಿದಿರಿ, ಅದನ್ನೂ ಹಂಚಿಕೊಳ್ಳಬೇಕು, 8 ತಿಂಗಳಿನಿಂದ ನಿಮ್ಮ ದರ್ಬಾರು ಏನು ನಡೆದಿದೆ ಇದನ್ನೂ ತೆಗೆದುಕೊಳ್ಳಬೇಕು. ಇದರಿಂದಾದ discredit ಅನ್ನೂ ನೀವು ತೆಗೆದುಕೊಳ್ಳಬೇಕು, ಇಲ್ಲಿ ಮಾಡಿದಂಥ ಒಳ್ಳೆಯ ಕೆಲಸದ ಬಗ್ಗೆ ಎದೆ ಬಡಿದುಕೊಂಡು ಹೇಳುತ್ತಿರುತ್ತೀರಿ, ಅದನ್ನೂ ತಾವು ತೆಗೆದುಕೊಳ್ಳಬೇಕು. ಆದರೆ, ಹಿಂದೆ 20 ತಿಂಗಳಿನಲ್ಲಿ ಮಾಡಿದಂಥ lapses ಅದು ಯಾವುದೇ ಇರಲಿ ಆ ತಪ್ಪುಗಳನ್ನೂ ಕೂಡ ತಾವು ವಹಿಸಿಕೊಳ್ಳಬೇಕು. ಅದಕ್ಕಾಗಿ ನಾನು ಇವತ್ತಿನ ದಿವಸ ಕೇಳುತ್ತಿದ್ದೇನೆ, ಈ ದಿಕ್ಕಿನಲ್ಲಿ ನೀವು ಏನು ಮಾಡಿದ್ದೀರಿ? Environment ಬಗ್ಗೆ ಸಿ.ಟಿ. ರವಿಯವರು Environment protector ತರಹ ಮಾತನಾಡಿದರು. ಆ ಭಾಗದಲ್ಲಿ ನಡೆದಂಥ ಎಲ್ಲಾ ಗಣಿಗಾರಿಕೆಯನ್ನು ನಿಲ್ಲಿಸುವ ಕೆಲಸವನ್ನು ಮಾಡಿದ್ದೇವೆ ಎನ್ನುವ ಹಾಗೆ ಹೇಳಿದರು.

ಅದಕ್ಕೆ ಇದರಲ್ಲಿ ಲೋಕಾಯುಕ್ತರು ಏನು ಹೇಳುತ್ತಾರೆಂದರೆ, 'In the course of this report, I have refered to the damage that is caused to the environment and water bodies, not only in the surrounding areas where mining activities are taking place, but also enroute of transportation. The damage enroute is mainly because the transportation of ore is done in open bodied vehicles and during transportation minerals dust fly out and settle down in the vegetation.' ಈ ಮಾತನ್ನು ಕೂಡ ಅವರು ಹೇಳಿದ್ದಾರೆ. ಇದಕ್ಕೆ ಯಾರು ಬೇಕು? ಇದಕ್ಕೆ ನಿಮ್ಮ Environmental clearance, Environment Department ಇದೆಯಲ್ಲ ಅವರು ಏನು initiative ಮಾಡಿದರು? ನಿಮ್ಮ ಅವಧಿಯ ಎಂಟು ತಿಂಗಳಲ್ಲಿ ಅಥವಾ ಈ ವರದಿ ಕೊಟ್ಟು 2-3 ತಿಂಗಳಲ್ಲಿ ಇದರ ಮೇಲೆ ಏನು steps ತೆಗೆದುಕೊಂಡಿದ್ದೀರಿ? ಇಲ್ಲಿಯವರೆಗೆ ಅದರ ಮೇಲೆ ಏನಾದರೂ ಬೆಳಕು ಚೆಲ್ಲಿದ್ದೀರಾ? ಇಲ್ಲ. ಕರ್ನಾಟಕ ರಾಜ್ಯದಲ್ಲಿ ಮೈನಿಂಗ್‌ನ್ನು ಯಾವ ರೀತಿಯಾಗಿ ಮಾಡಬೇಕೆನ್ನುವುದರ ಬಗ್ಗೆ ಲೋಕಾಯುಕ್ತರು ಅಧ್ಯಯನ ಮಾಡಿ ಸರ್ಕಾರಕ್ಕೆ ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಯಾವ್ಯಾವ ರೀತಿಯಾಗಿ

ಲುಕ್ಸಾನು ಆಗುತ್ತದೆ, ಯಾವ್ಯಾವ ರೀತಿಯಾಗಿ ಲಾಭವಾಗುತ್ತದೆಂದು ತಿಳಿಸಿದ್ದಾರೆ. ನಿಜವಾಗಲೂ ಐರನ್ ಓರ್ ರಫ್ತು ಮಾಡುವುದರಿಂದ ಸರ್ಕಾರಕ್ಕೆ ಏನೂ ಲಾಭವಿಲ್ಲವೆಂದು ಇದರಿಂದ ಸ್ಪಷ್ಟವಾಗುತ್ತದೆ. ಅದಕ್ಕೆ ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಮತ್ತು ತಮ್ಮ ಗಮನಕ್ಕೆ ಹಾಗೂ ಈ ಸದನದ ಗಮನಕ್ಕೆ ತರುತ್ತೇನೆ. ಇದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಮೈನಿಂಗ್‌ನಿಂದ ಏಕನಾಮಿಕ್ ಆಗಿ ಎಷ್ಟರ ಮಟ್ಟಿಗೆ ಕರ್ನಾಟಕ ರಾಜ್ಯಕ್ಕೆ ಲಾಭವಾಗುತ್ತದೆ ಅಥವಾ ಲುಕ್ಸಾನು ಆಗುತ್ತದೆನ್ನುವುದು ಇದರಲ್ಲಿದೆ. ನಾವು ಸ್ಟೀಲ್ ಪ್ಲಾಂಟ್ ಹಾಕಿ ಎಷ್ಟು ಜನರಿಗೆ ಕೆಲಸ ಕೊಡಬಹುದು, ಎಷ್ಟು ಹಣ ಅದರಿಂದ ಬರಬಹುದು, ಅದರಿಂದ ಎಷ್ಟು sal s tax ಬರಬಹುದು, ಬೇರೆ ರೀತಿಯಿಂದ ಅದರಿಂದ ಎಷ್ಟು ಲಾಭ ಆಗಬಹುದು ಎಂದು ಒಂದು ಕಡೆ ನೋಡಿದರೆ, ಬರಿ ಐರನ್ ಓರ್ ಇರುವ ಮಣ್ಣನ್ನು ಕೆದರಿ ರಫ್ತು ಮಾಡುವುದು, ಕೆದರುವುದು ರಫ್ತು ಮಾಡುವುದು, ಇದರಿಂದ ನಮ್ಮ ರಾಜ್ಯಕ್ಕೆ ಏನು ಲಾಭವಿದೆ ಎನ್ನುವುದನ್ನೂ ಕೂಡ ಹೇಳಿದ್ದಾರೆ. ಏನು ಹೇಳಿದ್ದಾರೆಂದರೆ, 'The minerals are not regenerated materials. Once an ore is extracted from earth, it is lost for all time to come. Research done in Karnataka indicates that the deposit of iron ore in this State is only sufficient to last in an ordinary situation for about 25-30 years'. ಇದೇ ರೀತಿಯಾಗಿ ನಡೆದರೆ 25 ರಿಂದ 30 ವರ್ಷಗಳವರೆಗೆ ಐರನ್ ಓರ್ ನಮ್ಮಲ್ಲಿ ಉಳಿಯಬಹುದೇ ಹೊರತಾಗಿ ಅದಕ್ಕಿಂತ ಹೆಚ್ಚಿಗೆ ಉಳಿಯಲಿಕ್ಕೆ ಸಾಧ್ಯವಿಲ್ಲ. ಇದೇ ರೀತಿಯಾಗಿ ನಡೆದರೆ ಇನ್ನು 5-10 ವರ್ಷಗಳಲ್ಲಿ ಮುಕ್ತಾಯ ಎಂದು ಅವರೇ ಈ ಮಾತನ್ನು ಹೇಳಿದ್ದಾರೆ. ಮುಂದುವರಿದು ಅವರು ಹೇಳುತ್ತಾರೆ, "therefore if the need of posterity is to be protected then there should be a limit on the quantity of iron ore to be mined at any given time. In this background a question arises, whether it is prudent for a State to permit the export of these minerals without thinking of posterity. Even

economically speaking one can see that a State is not a gainer from mining taking iron ore as an example it fetches an income to the Government of Karnataka by way of royalty ranging from Rs.16 to 27 per ton. ಒಂದು ಟನ್ ಅನ್ನು ರಫ್ತು ಮಾಡಿದರೆ ರಾಜ್ಯ ಸರ್ಕಾರಕ್ಕೆ ಅದರಿಂದ ಕೇವಲ 16 ರೂಪಾಯಿ ಮಾತ್ರ ಸಿಗುತ್ತದೆ. '....depending upon the quality of iron ore. During the peak period between 2004-06 the export price was even in the range of Rs.6000 to Rs.7000 per ton, even during the lease period the export price was between Rs.1500 to 2000 per MT. In the reference that is made to me by Government it is mentioned that the expenditure to extract one MP metric ton of iron ore is about Rs.150/- to which even Rs. 250/-......" ಅಂದರೆ ಅದನ್ನು ತೆಗೆಯುವುದಕ್ಕೆ 150 ರೂಪಾಯಿ ಖರ್ಚಾದರೆ ಅದನ್ನು 6 ರಿಂದ 7 ಸಾವಿರಕ್ಕೆ ಒಂದು ಟನ್‌ನಂತೆ ಮಾರುವುದು. ಇದರಿಂದ ನಮ್ಮ ಸರ್ಕಾರಕ್ಕೆ ಸಿಗುವುದು ಕೇವಲ 16 ರೂಪಾಯಿ. ಇದು ವರದಿ. ಇದಕ್ಕೆ ತಕ್ಕಂತೆ ನಾವು ಇವತ್ತು ರಫ್ತು ಮಾಡುವುದಕ್ಕೆ allow ಮಾಡಬೇಕೆ ಬಿಡಬೇಕೆ? ಅಥವಾ ಇದನ್ನು ನಾವು ನಿಲ್ಲಿಸಬೇಕೆ? ಅಥವಾ ಇಲ್ಲಿ ತೆಗೆಯತಕ್ಕಂಥ ಇಂಡ್‌ಸ್ಟ್ರೀಸ್‌ಗಳಿಗೆ ಕೊಡಬೇಕೆ ಎನ್ನುವುದು ತಕ್ಷಣ ಅದರ ಮೇಲೆ ತಾವು Cabinet Meeting ಮಾಡಿ ಹೇಳುವುದಕ್ಕೆ ಸಾಧ್ಯವಿತ್ತು. ಅದಕ್ಕೆ ಅವರು ಮುಂದೆ ಏನು ಹೇಳುತ್ತಾರೆಂದರೆ, 'Trading including export of minerals and reserve this mineral only for domestic consumption as captive mine dedicated to a given steel plant. This would solve many problems like excessive mining, illegal mining, because no dedicated plants would extract

minerals more than it could consume and there will be no benefit from such excessive mining, because they cannot sell it to anybody, because of a ban on trading minerals.' ಅದಕ್ಕೆ ಈ ವರದಿಯಲ್ಲಿ ಎಲ್ಲವೂ ಸಲಹೆ ಇದ್ದರೂ ಇದರ ಕಡೆ ಸರ್ಕಾರ ಗಮನಹರಿಸದೇ, ಸರ್ಕಾರ ಇದರ ಬಗ್ಗೆ ಕಾಳಜಿ ವಹಿಸದೇ, ಇದರ ಬಗ್ಗೆ ಚಿಂತಿಸದೇ, ಕೇವಲ ಹಿಂದೆ ಯಾರು ಕೊಟ್ಟರು? ಎಷ್ಟು ಕೊಟ್ಟರು? ನಾನೆಷ್ಟು ಕೊಟ್ಟೆ? ನನ್ನ ಕಾಲದಲ್ಲಿ ಏನಾಗಿದೆ? "ತೋರಿಸಿರಿ" ಎಂದು ಹೇಳಿದರೆ ಹೇಗೆ? ಕೆಲವು ಜನರಿಗೆ directly ಲಾಭವಾಗುತ್ತದೆ. ಕೆಲವು ಜನರಿಗೆ indirectly ಲಾಭವಾಗುತ್ತದೆ. ಹೀಗೆ ಸುಮ್ಮನೆ ಇರುವುದರಿಂದ indirectly ಸರ್ಕಾರಕ್ಕೆ benefit ಇರಬಹುದು. ಈ ವರದಿಯ ಮೇಲೆ Act ಮಾಡಿದರೆ ಎಲ್ಲಾ ನಿಂತು ಹೋಗುತ್ತದೆ. ಇದು ಒಂದು ಕಡೆಯಾದರೆ, ಮತ್ತೊಂದು ಕಡೆ, ಪದೇ ಪದೇ ಮಾನ್ಯ ಮುಖ್ಯಮಂತ್ರಿಗಳು ಏಕೆ ಹೇಳುತ್ತಾರೋ ಗೊತ್ತಿಲ್ಲ. ಇದರೊಳಗಡೆ ಅವರು ಸುಮಾರು 10 ರಿಂದ 15 ಸಲಹೆಗಳನ್ನು ಕೊಟ್ಟಿದ್ದಾರೆ. ಎಲ್ಲವನ್ನೂ ಓದದೇ ಪ್ರಮುಖವಾಗಿರುವುದನ್ನು ಮಾತ್ರ ಹೇಳುತ್ತೇನೆ. ಅದು ಯಾವುದೆಂದರೆ, 'approach the Central Government to get the border between the States of Andhra Pradesh and Karnataka abutting Bellary District surveyed and boundary fixed.' ಇದರಲ್ಲಿ ಒಂದು ಮ್ಯಾಪ್‌ನ್ನು ತೋರಿಸಿದ್ದಾರೆ. ಈಗಾಗಲೇ ಈ ಬಗ್ಗೆ ಮಾನ್ಯ ಜಯಚಂದ್ರರವರು ಓದಿದರು. ಹಿಂದೆ ಡಾ॥ ಪಿ.ರಾಜಶೇಖರನ್ ರವರು ಬರೆದಂಥ ಪತ್ರಕ objection ತೆಗೆದುಕೊಂಡರು, ಏನೆಂದರೆ, ಅವನು ಸರಿ ಇರಲಿಲ್ಲ, ಅವನ ಮೇಲೆ ರೈಡ್ ಆಯಿತು, ರೈಡ್ ಆಗಿರಲಿ. ಅನೇಕ ಸಾರಿ ಏನಾಗುತ್ತದೆ ಎಂದರೆ, ಕೆಲವು ಜನರ ಮೇಲೆ ಇನ್‌ಕಂ ಟ್ಯಾಕ್ಸ್‌ನವರು ರೈಡ್ ಮಾಡುತ್ತಾರೆ, ಕೆಲವು ಜನಗಳ ಮೇಲೆ illegal ಆಗಿ ಆಸ್ತಿ ಮಾಡಿದ್ದಕ್ಕೆ ರೈಡ್ ಆಗುತ್ತದೆ, ಈ ರೀತಿಯಾಗಿ ಬೇರೆ ಬೇರೆ ರೀತಿಯಲ್ಲಿ ರೈಡ್ ಆಗುತ್ತದೆ. ಆ ಪಾರ್ಟ್ ಬಿಡಿ, ಏಕೆಂದರೆ, ಅದಕ್ಕೆ ಕೇಸ್ ಆಗುತ್ತದೆ, ಶಿಕ್ಷೆ ಆಗುತ್ತದೆ. ಆದರೆ, ನಡೆದಂಥ ಘಟನೆ ಇತ್ತೋ ಇಲ್ಲವೋ? ಫ್ಯಾಕ್ಟ್ ಹೇಳಿ. ಅವನು ಬರೆದಿರುವಂಥದ್ದು ಸರಿಯೋ? ತಪ್ಪೋ? ಎಂದು ಹೇಳುವವರು ಯಾರು? ಇಲಾಖೆಯವರು ಹೇಳಬೇಕು, ಇಲ್ಲಾಂದೆ

ಕೋರ್ಟಿನವರು ಹೇಳಬೇಕು. ಇಲಾಖೆಯವರು ಕೂಡ ಇದರ ಬಗ್ಗೆ ಯಾವ ರೀತಿಯಾದ ಕಾಮೆಂಟ್ ಮಾಡಲಿಲ್ಲ. ಸರ್ಕಾರದವರು ಕೂಡ ಇದನ್ನು ಸರಿ ಎಂದು ಒಪ್ಪಿಕೊಂಡೆ ಲೋಕಾಯುಕ್ತರಾದ ಸಂತೋಷ್ ಹೆಗ್ಡೆ ಯವರಿಗೆ ನೀವು ಅಲ್ಲಿ ಕೂಡಿಸಿದಿರಿ. ಇದನ್ನು ಸಂತೋಷ್ ಹೆಗ್ಡೆಯವರಿಗೆ ಒಪ್ಪಿಸಿದ ಮೇಲೆ, ಅವರು ಈ ವರದಿಯನ್ನು ಕೊಟ್ಟ ಮೇಲೆ, ಅವರು ಕೂಡ ಹೇಳುವುದು ಏನೆಂದರೆ, ಈ ಬಾರ್ಡರ್‌ನಲ್ಲಿ ಇವತ್ತು dispute ಇರುವುದು ನಿಜ. ಈ dispute ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿದೆ. ಆ dispute ಜಾಗದಲ್ಲಿ ಓಬಳಾಪುರ ಮೈನಿಂಗ್ ಲೀಸ್ ಇದೆ. ಅದಕ್ಕಾಗಿ ನಮ್ಮ ಗಡಿ ಭಾಗವನ್ನು ಆಂಧ್ರದೊಳಗೆ ಹೆಚ್ಚಿನ ರೂಪದಲ್ಲಿ ತೆಗೆದುಕೊಂಡು ಇವತ್ತು ಅಲ್ಲಿ ಮೈನಿಂಗ್ ಮಾಡುತ್ತಿದ್ದಾರೆ ಎನ್ನುವ ಆಪಾದನೆ ಇದೆ. ಈ ಆಪಾದನೆ ಇಲ್ಲ ಎನ್ನುವುದಕ್ಕೆ ಕಾರಣಗಳಿಲ್ಲ. ನಮ್ಮ ಹತ್ತಿರ ಸ್ಪಷ್ಟವಾದ ಚಿತ್ರಗಳಿವೆ. ಉದಾ: ಹೇಳುವುದಾದರೆ, ಯಾವ ರೀತಿಯಾಗಿ ಬ್ರಿಟಿಷರ ಕಾಲದಲ್ಲಿ ಸರ್ವೆ ಮಾಡಿ ಅಲ್ಲಿ ಫಿಕ್ಸ್ ಮಾಡಿದ ಬೌಂಡರಿ ಕಲ್ಲುಗಳಿದ್ದವು, ಆ ಕಲ್ಲುಗಳನ್ನು ನೀವು ನೋಡಿ. ಅಥವಾ ಆ ಚಿತ್ರವನ್ನು ನೋಡಿ. ಇವತ್ತು ಇರತಕ್ಕಂಥ ಕಲ್ಲು ಮತ್ತು ಎಲ್ಲವನ್ನೂ ನೋಡಿ. ಇದು ನಮ್ಮ ಪಕ್ಷದ ಮೇಲ್ಮನೆಯ ಸದಸ್ಯರಾದವರೊಬ್ಬರು ಅಲ್ಲಿಗೆ ಹೋಗಿ ಎನ್‌ಕ್ವೈರಿ ಮಾಡಿಕೊಂಡು ಬಂದಿರುವುದು.

ಬಹುಶಃ ಇದನ್ನು ನೀವು ಒಪ್ಪುವುದಿಲ್ಲ. ಏಕೆಂದರೆ, ಒಂದು ಪಾರ್ಟಿಯವರು ಹೋಗಿ ಮಾಡಿದ್ದಾರೆಂದು ನೀವು ಹೇಳಬಹುದು. ಆದರೆ, ನಿಮ್ಮ ಸಮಕ್ಷಮಕ್ಕೆ ಮತ್ತು ನಿಮ್ಮ ಗಮನಕ್ಕೆ ತರಬೇಕೆಂಬ ಉದ್ದೇಶದಿಂದ ಮಾನ್ಯ ಉಪಾಧ್ಯಕ್ಷರಿಗೆ ಕಳುಹಿಸಿ ಕೊಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ನೋಡಿರಬೇಕು. ಅಥವಾ ಗಡಿಬಿಡಿಯಲ್ಲಿ ನೋಡಿಲ್ಲದೆ ಇರಬಹುದು. ಏಕೆಂದರೆ, ಅವರ ಆಶ್ವಾಸನೆಗಳು ಮತ್ತು ಕಾರ್ಯಕ್ರಮಗಳು ಜಾಸ್ತಿ ಇರುವುದರಿಂದ ಅವರಿಗೆ ಸಮಯವಿಲ್ಲ. ಇವೆಲ್ಲವನ್ನೂ ಕೂಡ ಅನುಷ್ಠಾನಕ್ಕೆ ತರಬೇಕಾದರೆ ನಮ್ಮ ರಿಪೋರ್ಟ್‌ಗಳನ್ನು ನೋಡುವುದಕ್ಕೆ ಸಮಯಬೇಕಲ್ಲವೇ? ನಿಮ್ಮ ರಿಪೋರ್ಟ್‌ಗಳನ್ನೆ ನೀವು ನೋಡಿಲ್ಲ. ಆದ್ದರಿಂದ, ನಮ್ಮ ರಿಪೋರ್ಟ್‌ನ್ನು ನೀವು ಎಲ್ಲಿ ನೋಡುತ್ತೀರಿ? ಇದನ್ನು ತಾವು ನೋಡಿ.

ಡಾ॥ ಬಿ.ಎಸ್. ಯಡಿಯೂರಪ್ಪ (ಮುಖ್ಯ ಮಂತ್ರಿಗಳು) :- ನಿಮ್ಮ ರಿಪೋರ್ಟ್ ನಿಮ್ಮ ನೇರಕ್ಕೆ prejudice ನಿಂದ ಕೂಡಿರತಕ್ಕಂಥ ರಿಪೋರ್ಟ್ ಆಗಿದೆ. ಎರಡು ದಿವಸದಲ್ಲಿ ನೀವು ಅಲ್ಲಿಗೆ ಹೋಗಿ ಆ ರೀತಿ, ಈ ರೀತಿಯಾಗಿದೆ ಎಂದು ವರದಿ ಕೊಟ್ಟಿದ್ದೀರಿ. ಈ ರಿಪೋರ್ಟ್ ಮೇಲೆ ನಿಮಗೆ ನಂಬಿಕೆ ಇದೆಯೇ?

ಇದನ್ನು ಮೊದಲು ಹೇಳಿ. ಉಳಿದವುಗಳ ಬಗ್ಗೆ ಆನಂತರ ಯೋಚನೆ ಮಾಡೋಣ. ಯಾರೋ ಮೂರ್ನಾಲ್ಕು ಜನ ಹೋಗಿ 48 ಗಂಟೆಯೊಳಗೆ ಒಂದು ವರದಿ ಕೊಟ್ಟು ಇದು ಸರಿ ಇದೆ ಎಂದು ಐದೂವರೆ ಕೋಟಿ ಜನರಿಗೆ ಹೇಳಿದರೆ ಏನು ಮಾಡುವುದು?

ಶ್ರೀ ಜಿ. ಜನಾರ್ದನರೆಡ್ಡಿ :- ಎರಡು ದಿವಸಗಳಲ್ಲಿ ವರದಿ ಕೊಟ್ಟಿದ್ದಾರೆಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ, ಸತ್ಯ ಶೋಧನ ಸಮಿತಿ ಕೇವಲ 2 ಗಂಟೆಯೊಳಗೆ ಸ್ಯಾಟಲೈಟ್ ಸರ್ವೆಯನ್ನು ಅವರ ಕಣ್ಣಿನಿಂದ ಮಾಡಿಬಿಟ್ಟರು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಕೆಲವು ಕೆಲಸಗಳು ಯಾವ ರೀತಿಯಾಗಿರುತ್ತವೆಂದರೆ, ನಾವು ಬಂಡಿ ದಾರಿಯಲ್ಲಿ ಬೆಳಗಾಂನಿಂದ ಬೆಂಗಳೂರಿಗೆ ಹೋದರೆ ಸುಮಾರು ತಿಂಗಳು ಆಗಬಹುದು. ಆದರೆ, ಬೆಳಗಾಂನಿಂದ ಬೆಂಗಳೂರಿಗೆ ವಿಮಾನದ ಮೂಲಕ ಹೋದರೆ ತಕ್ಷಣ ತಲುಪಬಹುದು. ಇದೇ ರೀತಿಯಾಗಿ ಅಲ್ಲಿ ಮಾಹಿತಿ ಕೊಡುವ ಸಿಬ್ಬಂದಿಗಳು ಮತ್ತು ಜನರು ಇದ್ದಾರೆ. ಅವರು ತಕ್ಷಣ ಮಾಹಿತಿ ಕೊಟ್ಟ ಮೇಲೆ ಎಷ್ಟರ ಮಟ್ಟಿಗೆ ಸತ್ಯಾಂಶವನ್ನು ಹೊರಕ್ಕೆ ತರಬೇಕಾಗಿತ್ತೋ ಆ ಕೆಲಸವನ್ನು ನಾವು ಮಾಡಿದ್ದೇವೆ. ಎರಡೇ ಗಂಟೆಯಲ್ಲಿ ಹೇಗೆ ಬಂತೆಂದರೆ, ಇವತ್ತಿನ ದಿವಸ ಎರಡು ಗಂಟೆಯಲ್ಲಿ ಬರುವಂಥ ವರದಿ ಕೂಡ ಇರುತ್ತವೆ ಮತ್ತೆ ಆರು ತಿಂಗಳಲ್ಲಿ ಬರುವಂಥ ವರದಿ ಕೂಡ ಇರುತ್ತವೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮಾನ್ಯ ಉಪಾಧ್ಯಕ್ಷರೆ, ಕಾಂಗ್ರೆಸ್ ಪಕ್ಷದ ಸತ್ಯ ಶೋಧನ ಸಮಿತಿಯ ವರದಿಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡಿದರು. ತಮ್ಮ ಅರಣ್ಯ ಇಲಾಖೆಯ ಅಧಿಕಾರಿ 2005ನೇ ಇಸವಿಯಲ್ಲಿ Black Gold Anthapura Mining Corporation ನಡೆಸಿರತಕ್ಕಂಥ ವ್ಯವಹಾರದ ಬಗ್ಗೆ ವರದಿ ಕೊಟ್ಟಿದ್ದಾರೆ. ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಸ್ಟೇ ಕೊಟ್ಟಿದ್ದರೂ ಕೂಡ ವ್ಯವಹಾರ ನಡೆಸಿದ್ದಾರೆ. ಇದರ ಫೈಲ್ ಅನ್ನು ತಾವು ತರಿಸಿಕೊಂಡಿದ್ದೀರಾ? ಇದರ ಡಿಟೇಲ್ ನನ್ನ ಹತ್ತಿರ ಇದೆ. ನಿನ್ನೆ ದಿವಸ ನಾನು ಮಾತನಾಡುವಾಗ ಇದು ಇರಲಿಲ್ಲ. ಇದು ನನ್ನ ಹತ್ತಿರ ಇದ್ದಿದ್ದರೆ ಇದರ ಬಗ್ಗೆ ಹೇಳುತ್ತಿದ್ದೆ. ಈ ಮಾಹಿತಿಯನ್ನು ನಾನು ತಮಗೆ ಕೊಡುತ್ತೇನೆ. ಅದರ ಬಗ್ಗೆ ನೀವು ಪ್ರಾಮಾಣಿಕವಾಗಿ ತನಿಖೆ ನಡೆಸುವುದಾದರೆ ಇದನ್ನು ನಿಮಗೆ ಕೊಡುತ್ತೇನೆ. ಏಕೆಂದರೆ, ಸಾವಿರಾರು ಕೋಟಿ ರೂಪಾಯಿ ಮಾಡಿದ್ದೇವೆಂದು ನಿನ್ನೆದಿವಸ ಕೆಲವು ಸದಸ್ಯರು ಹೇಳಿದರು. 2005ನೇ ಇಸವಿಯಲ್ಲಿ ನಾನೇನೂ ಅಧಿಕಾರದಲ್ಲಿರಲಿಲ್ಲ.

ಮಾನ್ಯ ಧರ್ಮಸಿಂಗ್‌ರವರು ಆ ಸಂದರ್ಭದಲ್ಲಿ ಅಧಿಕಾರದಲ್ಲಿದ್ದರು. ಆ ಸಂದರ್ಭದಲ್ಲಿ ಅಧಿಕಾರಿಗಳು ವರದಿ ಕೊಟ್ಟಿದ್ದಾರೆ. ಸ್ಟೇ ಇದ್ದಂಥ ಸಂದರ್ಭದಲ್ಲಿಯೂ ಕೂಡ Black Gold Miningನಲ್ಲಿ ಯಾರ್ಯಾರು ಯಾವ ರೀತಿಯಾಗಿ ಅಂದರೆ, 1997ರಲ್ಲಿ ನಾವು ಎಸ್ಕವೇಟ್ ಮಾಡುವಾಗ ಉಳಿದಿರತಕ್ಕಂಥ ಡಸ್ಟ್ ಅನ್ನು ತೆಗೆದುಕೊಳ್ಳುವುದಕ್ಕೆ ಅನುಮತಿ ಕೊಡಿ ಎಂದು ಹೇಳಿ ಆನಂತರ ಹೊಸದಾಗಿ ಡಿಗ್ ಮಾಡಿರತಕ್ಕಂಥ ವಿಷಯದ ಬಗ್ಗೆ 2005ರಲ್ಲಿ ನಿಮ್ಮ DFO ರವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಇಲ್ಲಿ ಯಾವ ರೀತಿಯಾಗಿ ವ್ಯವಹಾರಗಳು ನಡೆದಿವೆ ಎನ್ನತಕ್ಕಂಥದ್ದನ್ನು ತಮ್ಮ ಗಮನಕ್ಕೆ ತರುವುದಕ್ಕೋಸ್ಕರ ಇದನ್ನು ತಮಗೆ ಕಳುಹಿಸಿಕೊಡುತ್ತೇನೆ.

ಡಾ॥ ಬಿ.ಎಸ್. ಯಡಿಯೂರಪ್ಪ :- 2005ರಲ್ಲಿ ನೀಡಿರುವ ವರದಿಯ ಬಗ್ಗೆ ನೀವು 20 ತಿಂಗಳು ಅಧಿಕಾರದಲ್ಲಿದ್ದಾಗಲೇ..

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾವಿಬ್ಬರು ಅಧಿಕಾರದಲ್ಲಿದ್ದಾಗ ಎಂದು ಹೇಳಿ.

ಶ್ರೀ ಹೆಚ್.ಸಿ. ಮಹದೇವಪ್ಪ :- ಮಾನ್ಯ ಮುಖ್ಯ ಮಂತ್ರಿಗಳು ಸಮಾಧಾನದಿಂದ ಹೇಳಬೇಕು.

ಡಾ॥ ಬಿ.ಎಸ್. ಯಡಿಯೂರಪ್ಪ :- ನಾನು ಸಮಾಧಾನಗೊಂಡು ಬಹಳ ದಿನವಾಯಿತು. ಏಕೆಂದರೆ, ಕೂಗಾಡುವುದರಿಂದ ಉಪಯೋಗವಿಲ್ಲವೆಂದು ಈಗ ಅರ್ಥವಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಸಿಗಬೇಕಾಗಿರುವುದೆಲ್ಲಾ ಈಗ ಸಿಕ್ಕಿದೆ. ಆದ್ದರಿಂದ, ಈಗ ಏತಕ್ಕೆ ಕೂಗಾಡುತ್ತೀರಿ?

ಡಾ॥ ಬಿ.ಎಸ್. ಯಡಿಯೂರಪ್ಪ :- ನಾನು ಹೇಳುವುದೇನೆಂದರೆ, ಗೌರವಾನ್ವಿತ ಮಾಜಿ ಮುಖ್ಯ ಮಂತ್ರಿಗಳಾಗಿರುವ ಮಾನ್ಯ ಕುಮಾರಸ್ವಾಮಿಯವರು ಅದನ್ನು ಕಳುಹಿಸಿಕೊಡಲಿ. ತನಿಖೆಗೆ ಆದೇಶ ಮಾಡುವುದಕ್ಕೆ ನಾನೇನು ಸಂಕೋಚ ಪಟ್ಟುಕೊಳ್ಳುವುದಿಲ್ಲ. ಆದರೆ, ನಾನು ಹೇಳುವುದೇನೆಂದರೆ, 20 ತಿಂಗಳು ನಿಮ್ಮ ಹತ್ತಿರ ಈ ಇಲಾಖೆ ಇತ್ತು. ಈ ರೀತಿಯಾದ ಹಾವು ಚೇಳು ಇತ್ತೆಂದು ಗೊತ್ತಾದ ಮೇಲೆ ತನಿಖೆಯನ್ನು ಏಕೆ ಮಾಡಿಸಲಿಲ್ಲ. ಅದನ್ನು ಏಕೆ ಮುಚ್ಚಿಟ್ಟುಕೊಂಡಿದ್ದೀರಿ? ಈಗ ಏಕೆ ತೆಗೆದು ನೋಡುತ್ತಿದ್ದೀರಿ? ಇದು ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಹೇಳುವುದೇನೆಂದರೆ, ಇತ್ತ ಕಡೆ ಗಮನ ಹರಿಸತಕ್ಕಂಥ ಸಣ್ಣತನ ನನಗೆ ಇರಲಿಲ್ಲ. ನನ್ನ ಅಧಿಕಾರದ 20 ತಿಂಗಳ ಅವಧಿಯಲ್ಲಿ 53 ಹಳ್ಳಿಗಳಿಗೆ ಹೋಗಿ ಗ್ರಾಮವಾಸ್ತವ್ಯ ಕಾರ್ಯಕ್ರಮ ಮಾಡುವಾಗ ಬೆಳಿಗ್ಗೆ ಎದ್ದ ನಂತರ ರಾತ್ರಿ 1 ಗಂಟೆಯವರೆಗೆ ಬರುತ್ತಿದ್ದ ಬಡವರಿಗೆ ಏನು ಕಾರ್ಯಕ್ರಮ ಕೊಡಬೇಕೆಂಬುದರ ಕಡೆ ನನ್ನ ಗಮನ ಇತ್ತು. ನೋಡುವುದಕ್ಕೆ ನನಗೆ ಈಗ ಸಮಯವಿರುವುದರಿಂದ ಇವೆಲ್ಲವುಗಳ ಬಗ್ಗೆ ಗಮನಹರಿಸುತ್ತಿದ್ದೇನೆ.

ಡಾ॥ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಸಭಾಧ್ಯಕ್ಷರೆ, ಗಣಿಗಾರಿಕೆಗೆ ಸಂಬಂಧಪಟ್ಟಂಥ ಫೈಲ್‌ಗಳು ನಮ್ಮ ಹತ್ತಿರ ಇಲ್ಲದೆ ಇರುವುದೆಲ್ಲಾ ಅವರ ಮನೆಯಲ್ಲಿಯೇ ಇದೆ ಎಂದು ಈಗ confirm ಆಯಿತ್ತಲ್ಲವೇ? ನಮ್ಮ ಹತ್ತಿರ ಯಾವುದೇ ಫೈಲ್ ಇಲ್ಲ. ನಿಮ್ಮ ಹತ್ತಿರ ಫೈಲ್ ಇದೆ ಎಂದರೆ, ಅಷ್ಟು ಫೈಲ್ ಅನ್ನು ನೀವೇ ಇಟ್ಟುಕೊಂಡಿರಬಹುದು. ಆದ್ದರಿಂದ, ನಾನೇನು ಮಾಡಲಿ. ನನ್ನ ಹತ್ತಿರ ಫೈಲ್ ಇಲ್ಲ. ಅದನ್ನು ಕಳುಹಿಸಿಕೊಡಿ ನಾನು ಪರಿಶೀಲನೆ ಮಾಡುತ್ತೇನೆ. ನಿಮ್ಮ ಹತ್ತಿರ ಇರುವ ಮಾಹಿತಿಯನ್ನು ಬೇಗ ಕಳುಹಿಸಿಕೊಟ್ಟರೆ ಒಳ್ಳೆಯದು. ಒರಿಜಿನಲ್ ಡಾಕ್ಯುಮೆಂಟ್ ಕೂಡ ನಿಮ್ಮ ಹತ್ತಿರ ಇದ್ದರೆ ದಯವಿಟ್ಟು ಕಳುಹಿಸಿಕೊಡಿ. ತನಿಖೆ ಮಾಡಿಸೋಣ.

ಶ್ರೀ ಜಿ. ಜನಾರ್ದನರೆಡ್ಡಿ :- ಮಾನ್ಯ ಕುಮಾರಸ್ವಾಮಿಯವರು ನಿನ್ನೆ ದಿವಸ ಕೂಡ ಇದೇ ರೀತಿಯಾಗಿಯೇ ಅಂದರೆ, ನನ್ನ ಹತ್ತಿರ ಮಾಹಿತಿ ಇದೆ ನಿಮ್ಮ ಹತ್ತಿರ ಇಲ್ಲವೆಂದರೆ ಕಳುಹಿಸುತ್ತೇನೆಂದು ಹೇಳಿದರು. ಅವರು ಈಗ ಹೇಳಿರುವ ವಿಷಯವನ್ನು ನಾನು ಇಲ್ಲಿ ಹೇಳವುದಕ್ಕೆ ಬಯಸುತ್ತೇನೆ. Black Gold Minesಗೆ ಸಂಬಂಧಪಟ್ಟಂತೆ 1972ರ ಜಡ್ಜ್‌ಮೆಂಟ್‌ನಲ್ಲಿ ಬ್ಯಾಲೆನ್ಸ್ ಏರಿಯಾದಲ್ಲಿ ಮತ್ತೆ ಮೈನಿಂಗ್ ಮಾಡಿಕೊಳ್ಳುವುದಕ್ಕೆ ಸಂಬಂಧಪಟ್ಟಂತೆ ಕೋರ್ಟ್ ಮತ್ತು ಇತರೆ ಡಾಕ್ಯುಮೆಂಟ್‌ಗಳ ಬಗ್ಗೆ ಹೇಳಿದರು. Black Gold Mines ಮಾಲೀಕರು ಹೈಕೋರ್ಟ್‌ಗೆ ಹೋಗಿದ್ದರು. ಅವರು ಇದಕ್ಕಿಂತ ಮುಂಚೆಯೇ Black Gold Mines ಮಾಲೀಕರಾಗಿದ್ದರು. ನಮ್ಮದು ಹಳೆಯ ಡಂಪ್ ಇದೆ, ಅದನ್ನು ನಾವು ಮಾರಾಟ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಅವರು ಹೈಕೋರ್ಟ್‌ಗೆ ಹೋದಾಗ ಅವರಿಗೆ 3.5ಲಕ್ಷ ಟನ್‌ಗಳನ್ನು ಮಾರಾಟ ಮಾಡಿಕೊಳ್ಳುವುದಕ್ಕೆ ಹೈಕೋರ್ಟ್‌ನಿಂದ ಆದೇಶವಾಯಿತು. ಅದರ ಒಂದು ಬೇಸಿಸ್

ಮೇಲೆ ಮೆಟೀರಿಯಲ್ ಅನ್ನು ಅವರು ಮಾರಾಟ ಮಾಡಿಕೊಳ್ಳುತ್ತಾರೆ. ಇದಕ್ಕಿಂತ ಮೀರಿ ಅಲ್ಲೇನು Controversy ಆಗಿಲ್ಲ. ಆನಂತರ ಅದೇ Black Gold Mines ಅನ್ನು ವೀಜಿಯಂ ಎಂಬ ಎಸ್.ಕೆ.ಮೋಡಿ ವ್ಯಕ್ತಿಗೆ ಮಾನ್ಯ ಕುಮಾರಸ್ವಾಮಿಯವರೆ ಲೀಸ್ ಕೊಟ್ಟಿದ್ದಾರೆ. ಅದೇ ಏರಿಯಾದಲ್ಲಿ ಲೀಸ್ ಕೊಟ್ಟಿರುವವರು ಇದೇ ಕುಮಾರಸ್ವಾಮಿಯವರು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಸದನವನ್ನು ತಪ್ಪು ದಾರಿಗೆ ಎಳೆಯಬೇಡಿ.

ಶ್ರೀ ಜಿ. ಜನಾರ್ದನರೆಡ್ಡಿ :- ಸದನವನ್ನು ನಾನು ತಪ್ಪು ದಾರಿಗೆ ಎಳೆಯುತ್ತಿಲ್ಲ. ನಾನು ಸತ್ಯವನ್ನು ಹೇಳುತ್ತಿದ್ದೇನೆ. ಅವರಿಗೆ ತಾವೇ ಲೀಸ್ ಕೊಟ್ಟಿದ್ದೀರಿ ಇದರಲ್ಲಿ ಎರಡು ಮಾತಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮಾನ್ಯ ಉಪಾಧ್ಯಕ್ಷರೆ, ಅವರು ಹೇಳುತ್ತಿರುವುದು ಸುಳ್ಳು. ನನ್ನ ಹತ್ತಿರ ಡಾಕ್ಯುಮೆಂಟ್ ಇದೆ.

ಶ್ರೀ ಜಿ. ಜನಾರ್ದನರೆಡ್ಡಿ :- ಮಾನ್ಯ ಉಪಾಧ್ಯಕ್ಷರೆ, ನಾನು ಯೀಲ್ಡ್ ಆಗಿಲ್ಲ. ಆನಂತರ ಅವರು ಮಾತನಾಡಲಿ. ನಾನು ಪ್ರಶಾಂತವಾಗಿ ಮಾತನಾಡುತ್ತಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸಾಮಿ:- ನಾನು ಪ್ರಶಾಂತವಾಗಿಯೇ ಹೇಳುತ್ತಿದ್ದೇವೆ ಕೇಳಿ ಸ್ವಾಮಿ.

ಶ್ರೀ ಜಿ. ಜನಾರ್ದನರೆಡ್ಡಿ :- ನಿಮಗೂ ಕೂಡ ಪ್ರಶಾಂತತೆ ಇದೆ ಎಂದು ನನಗೆ ಗೊತ್ತು. ದಯಮಾಡಿ ಕುಳಿತುಕೊಳ್ಳಿ. ನಾನು ಹೇಳುತ್ತಿರುವುದು ಏನೆಂದರೆ, Black Gold Mineರವರು 3.5ಲಕ್ಷ ಟನ್ ಮಾರಾಟ ಮಾಡಿಕೊಳ್ಳುವುದಕ್ಕೆ ಹೈಕೋರ್ಟ್‌ನಿಂದ ಅನುಮತಿ ಪಡದುಕೊಂಡು ಮಾರಾಟ ಮಾಡಿಕೊಂಡರು. ಇದೇ ಏರಿಯಾವನ್ನು ಇನ್ನೊಬ್ಬ ವೀಜಿಯಂ ಎಂಬ ಸಂಸ್ಥೆಗೆ ಹೊಸದಾಗಿ ಲೀಸ್ ಕೊಟ್ಟಿರುವಂಥದ್ದು ಮಾನ್ಯ ಕುಮಾರಸ್ವಾಮಿಯವರು. ಇದರಲ್ಲಿ ಎರಡನೇ ಸಂಶಯವಿಲ್ಲ. ಮತ್ತೆ ಇನ್ನೊಂದು ವಿಷಯ ಏನೆಂದರೆ, 58 ಗ್ರಾಮಗಳಲ್ಲಿ ನಾನು ಗ್ರಾಮ ವಾಸ್ತವ್ಯ ಮಾಡಿದ್ದೇನೆ. ಆದರೆ, ಇವತ್ತಿನ ಮುಖ್ಯ ಮಂತ್ರಿಗಳು ಮಾಡುತ್ತಿಲ್ಲವೆಂದು ಅವರು ಹೇಳಿರತಕ್ಕಂಥದ್ದನ್ನು ನಾನು ಪತ್ರಿಕೆಗಳಲ್ಲಿ ನೋಡಿದ್ದೆ. ಆದರೆ, ಅವರು ಇವತ್ತು ನೇರವಾಗಿ ಸದನದಲ್ಲಿ ಹೇಳಿದ್ದಾರೆ. ನಾನು 150 ಕೋಟಿ ರೂಪಾಯಿ ಭ್ರಷ್ಟಾಚಾರದ

ಆರೋಪವನ್ನು ಮಾಡಿದ ಮೇಲೆ ಇದನ್ನು ತಪ್ಪಿಸುವುದಕ್ಕೋಸ್ಕರ ಗ್ರಾಮಗಳಿಗೆ ಹೋಗಿ ಇವರು ನಿದ್ದೆ ಮಾಡಿದರು. ಅವರ ಗ್ರಾಮ ವಾಸ್ತವ್ಯ ಕಾರ್ಯಕ್ರಮ ಕೂಡ ನಾನು ಆರೋಪ ಮಾಡಿದ ಮೇಲೆಯೇ ಅವರು ಪ್ರಾರಂಭ ಮಾಡಿದ್ದು, ತಾವು ರೆಕಾರ್ಡ್ ತೆಗೆದು ನೋಡಿ. ಮುಖ್ಯ ಮಂತ್ರಿಯಾದ ತಕ್ಷಣ ಅವರು ಗ್ರಾಮ ವಾಸ್ತವ್ಯ ಮಾಡಿಲ್ಲ. (ಗೊಂದಲ)ನಾನು ಆರೋಪ ಮಾಡಿದ ಮೇಲೆಯೇ ಅವರು ಗ್ರಾಮ ವಾಸ್ತವ್ಯ ಮಾಡಿದರು. ಬೇಕಾದರೆ, ರೆಕಾರ್ಡ್ ತೆಗೆಸಿ ನೋಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಇವರು ಸತ್ಯ ಹರಿಶ್ಚಂದ್ರನ ಮೊಮ್ಮಗ ಎನ್ನುವುದರ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. ಇವರು ಬಳ್ಳಾರಿಯಲ್ಲಿ ಒಂದು ಪತ್ರಿಕೆಯನ್ನು ನಡೆಸುತ್ತಿದ್ದರು. ಈಗಲೂ ಕೂಡ ನಡೆಸುತ್ತಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಯಾರೊಬ್ಬ ವ್ಯಕ್ತಿಯ ಮೇಲೆ ಬ್ಲಾಕ್‌ಮೇಲ್ ಪದವನ್ನು ಉಪಯೋಗ ಮಾಡಿ ಬರೆದಿದ್ದರು. ಇದಕ್ಕೋಸ್ಕರವೇ ಅವರು ಅಲ್ಲಿ ಪತ್ರಿಕೆ ನಡೆಸುತ್ತಿದ್ದಾರೆ. 150 ಕೋಟಿ ರೂಪಾಯಿ ಹಗರಣವನ್ನೂ ಸಹ ಅವರು ನನ್ನನ್ನು ಬ್ಲಾಕ್‌ಮೇಲ್ ಮಾಡುವುದಕ್ಕೆ ಮಾಡಿದ್ದು ಎಂಬುದಕ್ಕೆ Proof, ಒಂದು ಕೇಸ್‌ನಲ್ಲಿ ಇವರಿಗೆ ಕೋರ್ಟ್‌ನಲ್ಲಿ 5 ಸಾವಿರ ರೂಪಾಯಿ ದಂಡ ಹಾಕಿದ್ದಾರೆ. 5 ಸಾವಿರ ರೂಪಾಯಿ ಕಟ್ಟದಿದ್ದರೆ 3 ತಿಂಗಳು ಸಜೆ ಎಂದು ಕೋರ್ಟ್‌ನಲ್ಲಿ ತೀರ್ಮಾನವಾಗಿದೆ. ಇವರು ಹೊರಗಡೆ ಹೇಳುತ್ತಿರುವ ಸತ್ಯಕ್ಕೆ ಕೋರ್ಟ್ ಕೊಟ್ಟಿರುವ ಸರ್ಟಿಫಿಕೇಟ್ ಇದು. ಆದ್ದರಿಂದ, ಇವರಿಂದ ನಾನು ಕಲಿತುಕೊಳ್ಳಬೇಕಾಗಿಲ್ಲ.

ಶ್ರೀ ಜಿ. ಜನಾರ್ದನರೆಡ್ಡಿ :- ಅವರು 5 ಸಾವಿರ ರೂಪಾಯಿ ದಂಡ ಹಾಕಿದ್ದಾರೆಂದು ಹೇಳಿದ್ದಾರೆ. ಇದರ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. ಇವತ್ತಿನ ದಿವಸ ನಾನೊಬ್ಬ Member of Legislative Council. ಇವತ್ತು ನಾನು ಮಂತ್ರಿಯಾಗಿದ್ದೇನೆ. 5 ಸಾವಿರ ರೂಪಾಯಿ ದಂಡವನ್ನು ನಾನು ಕಟ್ಟಿದ್ದರೆ, ಅದನ್ನು ಇಡೀ ಮಾಧ್ಯಮದ ಮುಂದೆ ಮತ್ತು ರಾಜ್ಯದ ಮುಂದೆ ಇಡುವಂಥ ಜವಾಬ್ದಾರಿ ಅವರಿಗೆ ಇದೆ. ಇವತ್ತಿನ ದಿವಸ ಯಾವುದೇ ಒಂದು ವಿಚಾರದಲ್ಲಿ ನಾನು ಯಾವುದೇ ರೀತಿಯ ದಂಡ ಕಟ್ಟುವಂಥ ಕೆಲಸ ನನ್ನ ಕಡೆಯಿಂದ ಆಗಿಲ್ಲ. ಹಿಂದೆ ನಾನು ಎಂಎಲ್‌ಸಿ ಯಾಗಿದ್ದಂಥ ಸಂದರ್ಭದಲ್ಲಿ ಆರೋಪ ಮಾಡಿದ ತಕ್ಷಣ ನನ್ನ ಮೇಲೆ ಇದ್ದಂಥ ಕೇಸ್‌ಗಳನ್ನು ತೋರಿಸಿಲ್ಲವೆಂದು ಲೋಕಾಯುಕ್ತರ ಕಡೆ ಹೋಗಿ ಕೇಸ್ ಹಾಕಿದ್ದರು. ಮತ್ತೆ ಎಂಎಲ್‌ಸಿ ಯಿಂದ ನನ್ನನ್ನು disqualify ಮಾಡಿಸಬೇಕೆಂದು ನಾನು ತಪ್ಪು ಆಸ್ತಿ ವಿವರಣೆ ಕೊಟ್ಟಿದ್ದೇನೆಂದು ಹೈಕೋರ್ಟ್‌ನಲ್ಲಿ

ಕೇಸ್ ಹಾಕಿದ್ದರು. ಒಬ್ಬ ಮನುಷ್ಯ accused ಆಗಿ ಕೋರ್ಟ್‌ನಲ್ಲಿ ಶಿಕ್ಷೆಗೆ ಒಳಪಟ್ಟಿದ್ದರೆ ಮಾತ್ರ ಲೆಕ್ಕಾಚಾರಕ್ಕೆ ಬರುತ್ತದೆ. ಆದರೆ, ಇವತ್ತು ನಾನು ಯಾವುದೇ ಶಿಕ್ಷೆಗೆ ಗುರಿ ಯಾಗಿಲ್ಲ. ಮತ್ತೆ 5000 ರೂಪಾಯಿ ದಂಡವನ್ನು ಸಹ ಕಟ್ಟಿಲ್ಲ. 5000 ರೂಪಾಯಿ ದಂಡವನ್ನು ನಾನು ಕಟ್ಟಿದ್ದೇನೆ ಎನ್ನುವುದಾದರೆ, ಇಷ್ಟು ದೊಡ್ಡ ಸದನದಲ್ಲಿ ಇಷ್ಟೆಲ್ಲಾ ಮಾಧ್ಯಮದವರು ಸಹ ಇದ್ದಾರೆ. ಸತ್ಯ ಹರಿಶ್ಚಂದ್ರನ ಮೊಮ್ಮಗ ಎಂದು ಅವರು ಹೇಳಿದ್ದಾರೆ.

5 ಸಾವಿರ ರೂಪಾಯಿ ದಂಡ ನಾನು ಕಟ್ಟಿದ್ದರೆ ದಯಮಾಡಿ ತಾವು ಹೇಳಿ. ದಂಡ ಕಟ್ಟಿದ್ದರೆ, ಮಾನ್ಯ ಉಪಾಧ್ಯಕ್ಷರೇ ನಾಳೆ ಬೆಳಗ್ಗೆ ನಾನು ನನ್ನ ಮಂತ್ರಿ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ. ಅವರಿಗೆ ತಾಕತ್ತಿದ್ದರೆ ಅವರು ದಾಖಲೆಯನ್ನು ಕೊಡಲಿ. ನಾನು 5 ಸಾವಿರ ರೂ.ಗಳ ದಂಡವನ್ನು ಕಟ್ಟಿದ್ದು ನಾನು ಶಿಕ್ಷೆಗೆ ಒಳಗಾಗಿ ರುವುದನ್ನು, ನಾನು ಕಟ್ಟಿರುವ ಡಾಕ್ಯುಮೆಂಟ್‌ನ್ನು ಸದನ ಮುಂದೆ ಮಾಧ್ಯಮದ ಮುಂದೆ ಅವರು ಇಡಬೇಕು. ಇವತ್ತು ಇಡೀ ರಾಜ್ಯದ ಜನತೆಯ ನಂಬಿಕೆಯನ್ನು ಇವತ್ತು ನೀವು ಕಳೆದುಕೊಂಡು ಬಿಟ್ಟಿದ್ದೀರಿ. ಇವತ್ತು ಯಾರೂ ನಂಬುವುದಿಲ್ಲ. ಇವತ್ತು ಜನಾರ್ಧನ ರೆಡ್ಡಿ ಹೇಳಿರುವುದು ಸತ್ಯ. ನೀವು ಇವತ್ತು ಅಸತ್ಯವನ್ನು ಹೇಳುತ್ತಿದ್ದೀರಿ. 5 ಸಾವಿರ ರೂ.ಗಳ ದಂಡವನ್ನು ನಾನು ಕಟ್ಟಿದ್ದರೆ ತಮ್ಮ ಮುಂದೆ ಅದರ proof ನ್ನು ಇಡಬೇಕು.

Sri H.D. Kumaraswamy :- Date: 17-1-2005, Complainant: Govardhan v/s. Janardhan Reddy, Editor, ಈ ನಮ್ಮ ಕನ್ನಡ ನಾಡು. Judgment ಏನು ಕೊಟ್ಟಿದ್ದಾರೆ "In view of my discussion in the above paragraphs and my findings to the above points, I proceed to pass the following order. Acting U/s. 255 (2) of Cr.P.C. the accused is hereby convicted and sentenced to pay a fine of Rs.5,000/- for the offence punishable u/s. 500 of IPC. In default to pay a fine, he shall undergo simple imprisonment for a period of 3 months.

The Bail bond and security bond of the accused stands cancelled."

ಶ್ರೀ ಜಿ. ಕರುಣಾಕರ ರೆಡ್ಡಿ :- Story ಬೇಡ......

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಇದು story ಅಲ್ಲ.

ಶ್ರೀ ಜಿ. ಕರುಣಾಕರ ರೆಡ್ಡಿ :- Penalty ಕಟ್ಟಿರುವುದಕ್ಕೆ ರಶೀದಿ ತೋರಿಸಿ, ಇಲ್ಲವೆಂದರೆ ತಾಕತ್ತಿದ್ದರೆ ರಾಜೀನಾಮೆ ಕೊಡಿ.

ಶ್ರೀ ಜಿ. ಜನಾರ್ಧನ ರೆಡ್ಡಿ :- Penalty ಕಟ್ಟಿದ್ದೀನಾ ನಾನು? ಹೇಳಿ

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- Appeal ಹೋಗಿರುವ ಪ್ರಶ್ನೆ ಬೇಡ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಈ ತೀರ್ಪು ಯಾವ ಕೋರ್ಟಿನಲ್ಲಿ ಆಗಿರುವುದೆಂದರೆ In the court of Additional Civil Judge & JMFC., Bellary.

(ಗೊಂದಲ)

ಉಪಾಧ್ಯಕ್ಷರು :- ನೀವು ಇಬ್ಬರು ಮಾತನಾಡಿದರೆ ಹೇಗೆ? ಒಬ್ಬರು ಮಾತನಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮೂರೂವರೆ ಲಕ್ಷ ಟನ್ shift ಮಾಡುವುದಕ್ಕೆ, transport ಮಾಡುವುದಕ್ಕೆ Courtನಲ್ಲಿ permission ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ. Black Gold Mine Companyಗೆ ಚೆಕ್ ಯಾರಿಂದ ಪೇಮೆಂಟ್ ಆಯಿತು? ಆ material shift ಮಾಡುತ್ತೇವೆ, transport ಮಾಡುತ್ತೇವೆ ಎಂದು ಕೋರ್ಟಿನ ಮುಂದೆ ಹೇಳಿದ್ದಾರಲ್ಲಾ ಅದನ್ನು ಯಾರು shift ಮಾಡಿದರು, ಯಾರು transport ಮಾಡಿದರು?

ಶ್ರೀ ಜಿ. ಜನಾರ್ಧನ ರಡ್ಡಿ :- ದೇಶದಲ್ಲಿ ಯಾರು ಬೇಕಾದರೂ ಅದನ್ನು ತೆಗೆದುಕೊಳ್ಳಬಹುದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಹೌದು. ನಾನು ಇಲ್ಲವೆಂದು ಹೇಳಲಿಲ್ಲ. ಯಾರು ಬೇಕಾದರೂ ತೆಗೆದುಕೊಳ್ಳಬಹುದು ಎನ್ನುವುದರ ಬಗ್ಗೆ ನಾನು ಸತ್ಯವನ್ನು ಒಪ್ಪಿಕೊಳ್ಳುತ್ತೇನೆ. ಕೋರ್ಟ್‌ನ್ನು ಕೂಡ ಯಾವ ರೀತಿ ತಪ್ಪು ದಾರಿಗೆ ಎಳೆಯುತ್ತಾರೆನ್ನುವುದಕ್ಕೆ, ಅದನ್ನೆ ಹೇಳಿದ್ದು 2005 ರಲ್ಲಿ Sridhar ಎಂಬ I.F.S officer report ಕೊಟ್ಟಿದ್ದಾರಲ್ಲಾ, ಅದನ್ನು ಓದಬೇಕು ಎಂದರೆ ಓದುತ್ತೇನೆ. Material transport ಮಾಡಬೇಕು ಎಂದು ಕೋರ್ಟ್ ಮುಂದೆ ಸುಳ್ಳು ದಾಖಲಾತಿ ಕೊಟ್ಟು ಹೊಸದಾಗಿ excavation ಮಾಡಿದ್ದಾರೆಂದು report ಕೊಟ್ಟಿದ್ದಾರೆ. ಇದನ್ನು ನಾನು ಹೇಳುತ್ತೇನೆ ಉಪಾಧ್ಯಕ್ಷರೇ, "During the evaluation of Bellary Division works our team has inspected a few mines and I am stating my observations on Black Gold Mines and Minerals, Bellary Taluk as an early report. Issues notice regarding need of early action. Black Gold and Minerals 553.50 Hectare, Honnahalli village, Bellary Taluk. This Iron ore leased mines were operational from the year 1957-1992. Thereafter the lessee had applied for renewal of lease which was rejected by the Government. Thereafter, he had filed a petition before the High Court of Karnataka which was dismissed. Meanwhile, they had approached the Hon'ble High Court of Karnataka, in W.P.No.9999/2004...... ಎಂದು ಹೇಳುತ್ತಾ ಹೋಗಿ, ಮುಂದೆ claiming that major portion of the ore extracted using the lease period was lifted by him during the lease period and that 3.5

lakhs metric ton of iron ore which was extracted but transported is lying in the mines along with the ten thousand metric ton of BHP lumps."

(ಗೊಂದಲ)

ಶ್ರೀ ಜಿ. ಜನಾರ್ಧನ ರೆಡ್ಡಿ :- ಅವರು ಅಷ್ಟಕಷ್ಟಕ್ಕೆ ಉತ್ತರವನ್ನು ಕೊಟ್ಟರು. ನಾನು ಒಂದೆ ಮಾತನ್ನು ಹೇಳುತ್ತಿದ್ದೇನೆ. ನಾನು ಪೆನಾಲ್ಟಿ ಕಟ್ಟಿದ್ದರೆ ಇಲ್ಲಿಯ ಮೀಡಿಯಾ ಇದೆ ಸಾಕ್ಷಿಯ ಸಮೇತ ಇಡಿ. ಅದು ಓದುವುದು ನಂತರ ಇದು ಓದುವುದು.

ಶ್ರೀ ಹೆಚ್.ಡಿ. ರೇವಣ್ಣ :- ಅವರು ಯೀಲ್ಡ್ ಆಗಿಲ್ಲ ಅವರನ್ನು ಕುಳಿತುಕೊಳ್ಳಲು ಹೇಳಿ.

ಉಪಾಧ್ಯಕ್ಷರು :- ಅವರು ಯೀಲ್ಡ್ ಆಗಿಲ್ಲ ನೀವು ಕುಳಿತುಕೊಳ್ಳಿ. ಮಾನ್ಯ ರೇವಣ್ಣನವರೆ, ನಾನು ನಿಮಗೂ ಮಾತನಾಡಲು ಅನುಮತಿಯನ್ನು ಕೊಟ್ಟಿಲ್ಲ. ಅವರು ಕುಳಿತುಕೊಳ್ಳುತ್ತಾರೆ ನೀವು ಕುಳಿತುಕೊಳ್ಳಿ.

ಶ್ರೀ ಜಿ. ಜನಾರ್ಧನ ರೆಡ್ಡಿ :- ಇದಕ್ಕೆ ಒಂದು ಸಮಯವನ್ನು ಕೊಡಿ. ಸನ್ಮಾನ್ಯ ಖರ್ಗೆಯವರು ಮಾತನಾಡುತ್ತಿದ್ದರು.

ಉಪಾಧ್ಯಕ್ಷರು :- ಒಂದು ನಿಮಿಷ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಉಪಾಧ್ಯಕ್ಷರೇ, ಅವರು ಸತ್ಯ ಶೋಧನಾ ಸಮಿತಿಯೆಂದು ಹೇಳಿದರಲ್ಲಾ,. ಬೇರೆ ಏನು ಬೇಡ. "During my inspection of these mines on 6-12-2004, I have found that the area was freshly mined and 20,000 metric ton of iron ore was already transported down the hill and stocked in a private land..ಇದನ್ನೆಲ್ಲಾ ಹೇಳುತ್ತಾ ಹೋಗುತ್ತಾ..."There is just about 200 lorry loads of old discarded

dumped material already mined during the lease period and stocked in the premises and this material has hardly any ore." ಇದನ್ನು ಎಲ್ಲಾ ಹೇಳುತ್ತಾ ಅಲ್ಲಿ ಅವರು forest officerನ್ನು ಕೇಳುತ್ತಾರೆ, ಅವರು ಹೇಳುತ್ತಾರೆ, "The beat guard has been working in the named beat for the past 5 years. It is not desirable to continue him in this area any further" ಎಂದು ಹೇಳುತ್ತಾರೆ. "No action is taken by the Forest Department with regard to illicit felling in the area." ಇದು 2005 ರಲ್ಲಿ ಕೊಟ್ಟಿರತಕ್ಕ ವರದಿ. ಇವರು ನಿನ್ನೆ ನಾನು ಒಬ್ಬ ಕಾನ್‌ಸ್ಟೇಬಲ್ ಮಗನಾಗಿ ಹುಟ್ಟಿ ಇವತ್ತು 1500 ಕೋಟಿ ರೂ.ಗಳ ಸರದಾರ ಎಂದು ಹೇಳಿದರು. ಕಾನ್‌ಸ್ಟೇಬಲ್ ಮಕ್ಕಳಿಗೆಲ್ಲಾ ಯಾವ ರೀತಿ ಸಾವಿರ ಕೋಟಿ ರೂ.ಗಳನ್ನು ಮಾಡುವುದನ್ನು ತಿಳಿಯಲು ಅವರು ಇವರು ಮಾದರಿಯಾಗದ್ದಾರೆ. ಇದಕ್ಕಿಂತ ಇನ್ನೇನು ಸತ್ಯಬೇಕಿಲ್ಲ.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ :- ಸರ್ ಒಂದ ನಿಮಿಷ ನಾನು ಮಾತನಾಡುತ್ತೇನೆ.

ಉಪಾಧ್ಯಕ್ಷರು :- ಡಾ॥ ಹೆಚ್.ಸಿ.ಮಹದೇವಪ್ಪನವರೆ, ನೀವು ಆಮೇಲೆ ಮಾತನಾಡಿ. ನಾನು ಅವರಿಗೆ ಮಾತನಾಡುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೇನೆ.

(ಗೊಂದಲ)

ಉಪಾಧ್ಯಕ್ಷರು :- ಈಗ ಅವರು ಮಾತನಾಡುವುದಕ್ಕೆ ನಾನು ಅನುಮತಿಯನ್ನು ಕೊಟ್ಟಿದ್ದೇನೆ. ಈಗ ಅವರು ಮಾತನಾಡಲಿ.

ಶ್ರೀ ಜಿ. ಜನಾರ್ಧನರೆಡ್ಡಿ (ಪ್ರವಾಸೋದ್ಯಮ ಸಚಿವರು) :- ಮಾನ್ಯ ಉಪಾಧ್ಯಕ್ಷರೆ,ಇವೆಲ್ಲಾ ವಿಷಯವನ್ನು ಮಾತನಾಡುವುದಕ್ಕಿಂತ ಮುಂಚೆ ಒಂದೇ ವಿಷಯವನ್ನು ನಾನು ಮಾತನಾಡುತ್ತೇನೆ. ನಾನು ಕೋರ್ಟಿನಲ್ಲಿ ಶಿಕ್ಷೆಗೆ ಒಳಪಟ್ಟಿದ್ದು ಅಥವಾ ನಾನು ಪೆನಾಲ್ಟಿಯನ್ನು ಕಟ್ಟಿದ್ದು ಅಥವಾ ಅವರು ಏನೇನು ತೋರಿಸಿದ್ದೆಲ್ಲಾ

ಸತ್ಯವಾದರೆ ನಾಳೆ ನಾನು ರಾಜೀನಾಮೆ ಕೊಡುತ್ತೇನೆ. ಅವರು ಸದನದ ಮುಂದಿಡಬೇಕು, ನಾನು ಕೋರ್ಟಿಗೆ ಪೆನಾಲ್ಟಿಯನ್ನು ಕಟ್ಟಿರುವ ಬಗ್ಗೆ ಎಲ್ಲಾ documentಗಳನ್ನು ಅವರು ತೆಗೆದುಕೊಂಡು ಬಂದು ಮಾಧ್ಯಮದ ಮುಂದೆ ಇಡಬೇಕು. ನಾನು ಮಾತನಾಡುವುದನ್ನು ತಾವು ಕೇಳಿ. ನೀವು ಏತಕ್ಕಾಗಿ ಸುಮ್ಮನೆ ಮಾತನಾಡುತ್ತೀರಿ?

ಮಾನ್ಯ ಸದಸ್ಯರು :- ನಿಮಗೆ ನಾಚಿಕೆಯಿಲ್ಲ.

ಶ್ರೀ ಜಿ. ಜನಾರ್ದನರೆಡ್ಡಿ :- ಅವರು ಮಾತನಾಡುವಂತಹ ಕಾಲದಲ್ಲಿ ನಮ್ಮವರು ಯಾರಾದರೂ ಎದ್ದು ಮಾತನಾಡಿದ್ದಾರಾ? ನಿಮ್ಮವರು ಮಾತನಾಡುವ ಸಮಯದಲ್ಲಿ ನಮ್ಮವರು ಯಾರೂ ಕೂಡ ಗಲಾಟೆಯನ್ನು ಮಾಡಿರುವುದಿಲ್ಲ. ಏನಿದೆಲ್ಲಾ? ಪದ್ಧತಿ ಇಲ್ಲ ನಿಮಗೆ.

(ಗೊಂದಲ)

ಉಪಾಧ್ಯಕ್ಷರು :- ಈಗ ನಾನು ಅವರಿಗೆ ಮಾತನಾಡುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೇನೆ. ಅವರು ಮಾತನಾಡಲಿ.

ಶ್ರೀ ಜಿ. ಜನಾರ್ಧನರೆಡ್ಡಿ :- ನಿಮ್ಮವರು ಮಾತನಾಡುವ ಟೈಮ್‌ನಲ್ಲಿ ನಮ್ಮವರು ಯಾರೂ ಮಾತನಾಡಲಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನಾನು Court order documentನ್ನು ತಮ್ಮ ಕಡೆಗೆ ಕೊಡುತ್ತಿದ್ದೇನೆ. ಅದನ್ನು ತಾವು ನೋಡಬಹುದು. ಅದು duplicate ಅಥವಾ original ಎಂಬುದನ್ನು ತಾವು ನೋಡಬಹುದು.

ಶ್ರೀ ಜಿ. ಜನಾರ್ದನರೆಡ್ಡಿ :- ನಾನು ಒಂದು ಪತ್ರಿಕೆಯನ್ನು ನಡೆಸುತ್ತಿದ್ದೆ. Blackmail ಸಲುವಾಗಿ ನಾನು ಪತ್ರಿಕೆಯನ್ನು ಇಟ್ಟುಕೊಂಡಿದ್ದೆ, ಆ blackmail ಮಾಡುವ ನೆಪದಲ್ಲಿ ನನ್ನ ಮೇಲೆ 150 ಕೋಟಿ ರೂಪಾಯಿ ಆರೋಪ ಬಂತು ಎಂದು ಅವರು ಹೇಳಿದರು. ಏಕೆಂದರೆ ಅವರು ಹೇಳಿರುವುದಕೋಸ್ಕರ ನಾನು ಹೇಳಬೇಕಾಗುತ್ತದೆ, 2004ರಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿರುವಂತಹ ಸಂದರ್ಭದಲ್ಲಿ ಇವರು Amogha Broadband ಎಂದು ಹೇಳಿ ಒಂದು T.V.Channelನ್ನು

ಪ್ರಾರಂಭಮಾಡಿದರು, ಕಸ್ತೂರಿ ಟಿ.ವಿ.ಚಾನೆಲ್ ಎಂದು ಪ್ರಾರಂಭ ಮಾಡಿದರು, ಇವರೇ, ಕುಮಾರಸ್ವಾಮಿಯವರು ಮತ್ತು ಈ ಸದನದಲ್ಲಿರುವಂತಹ ಅವರ ಶ್ರೀಮತಿಯವರು ತಲಾ ಒಂದು ಕೋಟಿ ರೂಪಾಯಿ ಗಳನ್ನು ಹಣವನ್ನಿಟ್ಟು ಟಿ.ವಿ.ಚಾನೆಲ್‌ನ್ನು ಪ್ರಾರಂಭ ಮಾಡಿದ್ದಾರೆ. ನಾನು ಸಹ ಪತ್ರಿಕೆಯನ್ನು ಪ್ರಾರಂಭ ಮಾಡಿದ್ದೇನೆ. ಅವರು ಟಿ.ವಿ.ಚಾನೆಲ್‌ನ್ನು ಪ್ರಾರಂಭ ಮಾಡಿದ್ದಾರೆ. ಇಡೀ ರಾಜ್ಯದ ಜನರನ್ನು blackmail ಮಾಡುವ ರೀತಿಯಲ್ಲಿ ಮಾಡಿದರು. But ಅದರಲ್ಲಿ ಅವರು click ಆಗಲಿಲ್ಲ. ಅದರೆ ಇನ್ನೊಂದು ವಿಷಯವೇನೆಂದರೆ, ನಾನು blackmail ಮಾಡುವುದರಲ್ಲಿ click ಆಗಿದ್ದಾರೆಂದು ಅವರು ಹೇಳಿದರು. ಅವರು click ಆಗಲಿಲ್ಲ. ಅವರ ಬಗ್ಗೆಯೂ ಕೂಡ ಮಾತನಾಡಿದರೆ ಈ ರೀತಿಯಾದ ವಿಷಯಗಳು ಸಾಕಷ್ಟು ಇದೆ. ಸುಮಾರು criminalಗಳು ಈ ಕರ್ನಾಟಕ ರಾಜ್ಯದಲ್ಲಿ criminals ಆಗಿರುವಂತಹ ವ್ಯಕ್ತಿಗಳು ಕೂಡ ಆ ಸಂಸ್ಥೆಯಲ್ಲಿ Board of Directors ಆಗಿದ್ದಾರೆ. ಏಕೆಂದರೆ ಸದನದಲ್ಲಿ ಇಲ್ಲದಿರುವ ಕಾರಣಕ್ಕಾಗಿ ಅವರ ಹೆಸರನ್ನು ನಾನು ಹೇಳುವುದು ಬೇಡ. ಆದರೆ ಇಲ್ಲಿ ವಿಷಯ.....

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಅವರು ಸದನವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ಯಾರು criminals ಇದ್ದಾರೆ ಅವರ ಹೆಸರುಗಳನ್ನು ಸದನದ ಮುಂದೆ ಇಡಬೇಕು.

ಶ್ರೀ ಜನಾರ್ದನರೆಡ್ಡಿ :- Criminals ನಿಮ್ಮ ಸಂಸ್ಥೆಯಲ್ಲಿ directorsಗಳಾಗಿದ್ದಾರೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ :- ಯಾರು criminals ಇದ್ದರೆ ಆ ಬಗ್ಗೆ ಮಾಹಿತಿಯನ್ನು ಅವರು ಸದನದ ಮುಂದಿಡಬೇಕು. ಈ ರೀತಿ ಜವಾಬ್ದಾರಿಯುತವಾಗಿರತಕ್ಕಂತಹ ಒಬ್ಬ ಮಂತ್ರಿ ಈ ರೀತಿಯಾಗಿ ಲಘುವಾಗಿ ಮಾತನಾಡುವಂತಹದ್ದು ಸರಿಯಿಲ್ಲ. ಯಾರು criminalಗಳು ಇದ್ದಾರೆಂದು ಅವರು ಹೇಳಬೇಕು.

ಶ್ರೀ ಜಿ. ಜನಾರ್ದನರೆಡ್ಡಿ :- ನೀವು ಮಾತನಾಡುವಂತಹ ಸಂದರ್ಭದಲ್ಲಿ ನಾನು ಮಾತನಾಡಿಲಿಲ್ಲ.

ಮಾನ್ಯ ಉಪಾಧ್ಯಕ್ಷರೆ, ನಾನು ಯೀಲ್ಡ್ ಆಗಿಲ್ಲ. ಅವರು ಮಾತನಾಡುವಂತಹ ಸಂದರ್ಭದಲ್ಲಿ ನಾನು ಮಾತನಾಡಲಿಲ್ಲ.

ಉಪಾಧ್ಯಕ್ಷರು :- ತಾವು ಬೇಗ ಮುಗಿಸಿ.

ಶ್ರೀ ಜಿ. ಜನಾರ್ದನರೆಡ್ಡಿ :- ನಾನು ಇಷ್ಟೆ ಹೇಳುತ್ತಿದ್ದೇನೆ. ಇವತ್ತು ಒಂದು ಪತ್ರಿಕೆಯಲ್ಲಿ ನಮ್ಮಲ್ಲಿರುವಂತಹ ರಾಜಕೀಯ ವಿರೋಧಿಗಳು ಯಾವುದೇ ಒಂದು defamation case ಹಾಕುವುದಕ್ಕೆ ಅವರಿಗೆ ಅಧಿಕಾರಿವಿದೆ. ಆ ಕೇಸನ್ನು ಅವರು ಹಾಕಿರುವಂತಹ ಸಂದರ್ಭದಲ್ಲಿ ಆ ಕೇಸಿನ ಬಗ್ಗೆ ಅವರು ಏನು orderನ್ನು ಓದಿದ್ದಾರೆ. 5,000 ರೂಪಾಯಿ ಪೆನಾಲ್ಟಿಯನ್ನು ಕಟ್ಟಬೇಕು ಇಲ್ಲದಿದ್ದರೆ 3 ತಿಂಗಳು ಶಿಕ್ಷೆ ಒಳಪಡುವಂತಹದ್ದು ಕಾನೂನಿನಲ್ಲಿ ಯಾವುದೇ ಒಂದು Magistrate ಕೊಡುವಂತಹ order. ಅದರ ಮೇಲೆ District Courtನಲ್ಲಿ stay ಆಗಿದೆ. ಅದನ್ನು ತಿಳಿದುಕೊಳ್ಳದೆಯೇ. ಅವರು ನಾನು 5,000 ರೂಪಾಯಿ ಪೆನಾಲ್ಟಿಯನ್ನು ಕಟ್ಟಿದ್ದೇನೆಂದು ಹೇಳಿದರು.

(ಗೊಂದಲ) .

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಉಪಾಧ್ಯಕ್ಷರೆ, ತಾವು ದಯಮಾಡಿ... ಅವರು ಕ್ರಿಮಿನಲ್‌ಗಳು ಇದ್ದಾರೆಂದು ಅವರು ಹೇಳಿದರು. ಅವರಿಗೆ 5,000 ರೂಪಾಯಿಗಳ ದಂಡವನ್ನು ಹಾಕಿದ್ದಾರೆಂದು orderನಲ್ಲಿದೆ. ಮೊದಲು ಅವರಿಗೆ ರಾಜೀನಾಮೆ ಕೊಡುವುದಕ್ಕೆ ಹೇಳಿ. ಆಮೇಲೆ ಮಾತನಾಡಲಿ.

ಶ್ರೀ ಜಿ. ಜನಾರ್ದನರೆಡ್ಡಿ :- ಮಾನ್ಯ ರೇವಣ್ಣನವರೆ,ನಾನು ಪೆನಾಲ್ಟಿಯನ್ನು ಕಟ್ಟಿದ್ದರೆ ತೋರಿಸಿ ಎಂದು ನಾನು ಹೇಳಿರುವುದು.

(ಗೊಂದಲ)

ಶ್ರೀ ಜಿ. ಜನಾರ್ದನರೆಡ್ಡಿ :- ಇಲ್ಲಿ ನಾನು ಪೆನಾಲ್ಟಿಯನ್ನು ಕಟ್ಟಿರುವುದಿಲ್ಲ. ನಾನು ಯಾವುದೇ ಶಿಕ್ಷೆಗೆ ಒಳಪಟ್ಟಿರುವುದಿಲ್ಲ. (ಗೊಂದಲ) ನಾನೊಬ್ಬ ಪತ್ರಕರ್ತನಾಗಿ ದ್ದೇನೆ. ಇಡೀ ರಾಜ್ಯದ ಜನರು.....

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಕೋರ್ಟ್‌ನಲ್ಲಿ ಆರ್ಡರ್ ಆಗಿದೆ.

(ಗೊಂದಲ)

ಶ್ರೀ ಜಿ. ಜನಾರ್ದನರೆಡ್ಡಿ :- ಸುಮ್ಮನೆ ತಾವು ಕುಳಿತುಕೊಳ್ಳಿ. Next Assemblyಗೆ ತಾವು 25 ಮಂದಿಯೂ ಕೂಡ ಬರುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ :- ಅವರು ಹೇಳಿರುವುದು ಕಡತದಲ್ಲಿದೆ. ಅವರು ಹೇಳಿಲ್ಲದೆ ಹೋಗಿದ್ದರೆ ಅವರಿಗೆ ಕೋರ್ಟಿನಲ್ಲಿ ಅಗಿಲ್ಲವೆಂದರೆ ನಾನು 5 ನಿಮಿಷಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಅವರಿಗೆ ನೈತಿಕ ಹಕ್ಕು ಇದ್ದರೆ ಕೂಡಲೇ ಅವರು ರಾಜೀನಾಮೆಯನ್ನು ಕೊಡಬೇಕು.

ಶ್ರೀ ಜಿ. ಜನಾರ್ದನರೆಡ್ಡಿ :- ನೀವು 5,000 ರೂಪಾಯಿಗಳನ್ನು ದಂಡ ಕಟ್ಟಿದ್ದಾರೆಂದು ಹೇಳಿದರು.

(ಗೊಂದಲ)

ಶ್ರೀ ಜಿ. ಜನಾರ್ದನರೆಡ್ಡಿ :- 5,000 ರೂಪಾಯಿ ದಂಡ ಕೂಡ ಕಟ್ಟಿದ್ದಾರೆಂದು, ಇವರ ಜಾತಕ ಎಂದು ಹೇಳಿದವರು ಇವರು. ನಾನು 5,000 ರೂಪಾಯಿ ದಂಡವನ್ನು ಕಟ್ಟಿದ್ದರೆ ಅವರು ಆ recordsನ್ನು ಇವರು ಬಹಿರಂಗಪಡಿಸಬೇಕು. ಇವತ್ತು ಹಾಗೆ ತೆಗೆದುಕೊಂಡರೆ ಇವರ ಕುಟುಂಬದಲ್ಲಿ ಇವರ ತಂದೆಯಿಂದ ಹಿಡಿದು ಮಕ್ಕಳಿಂದ ಹಿಡಿದು ಇವತ್ತು ಮೊಮ್ಮಕ್ಕಳ ಮೇಲೆಯೂ ಕೂಡ ಇವತ್ತು ಕೋರ್ಟಿನಲ್ಲಿ ಕೇಸುಗಳಿವೆ. ಇವತ್ತು ಕೋರ್ಟಿನಲ್ಲಿ ಕೇಸುಗಳು ಇದ್ದ ತಕ್ಷಣ ಆಗುವುದಿಲ್ಲ. ನಾನು ಮಾತನಾಡಿ ಮುಗಿಸಿದ ನಂತರ ನೀವು ಮಾತನಾಡಿ. ಪೊಲೀಸ್ ಕಾನ್ಸ್‌ಟೇಬಲ್, ಪೊಲೀಸ್ ಕಾನ್ಸ್‌ಟೇಬಲ್ ಮಕ್ಕಳು ಎಂದು ಹೇಳಿ, ತಾವು ಹೇಳಿರುವುದಕ್ಕೆ ನಾನು ಮಾತನಾಡಬೇಕಾಗುತ್ತದೆ. ಏಕೆಂದರೆ ನಿನ್ನೆಯೂ ಕೂಡ ಹೇಳಿದ್ದೇನೆ. ಇವತ್ತು ಈ ರಾಜ್ಯದಲ್ಲಿ ಮುಖ್ಯಮಂತ್ರಿಯಾಗುವುದಕ್ಕೆ ಚಪ್ಪಲಿ ಏಟು, ಕಲ್ಲೇಟು ಹಾಕಿ, ರೌಡಿಸಂ ಮಾಡಿ ಮುಖ್ಯಮಂತ್ರಿಯಾಗಿರುವುದು ನೈಜ ನಿಮ್ಮದು. ಇವತ್ತು ತಾವು ಮಾತು ಮಾತಿಗೆ ಕಾನ್ಸ್‌ಟೇಬಲ್ ಮಕ್ಕಳು ಎಂದು ಹೇಳುತ್ತಿದ್ದೀರಿ. ಈ ತರಹ ಕಾನ್ಸ್‌ಟೇಬಲ್ ಮಕ್ಕಳು ಎಂದು ಹೇಳುತ್ತೀರಿ.

(ಗೊಂದಲ)

ಶ್ರೀ ಜಿ. ಜನಾರ್ದನರೆಡ್ಡಿ :- ದಂಡ ಕಟ್ಟಿದ್ದಾರೆ ಎಂದು ಹೇಳಿದ್ದಾರೆ. ತಾವು ಕಡತಗಳನ್ನು ತೆಗೆಸಿ ದಯಮಾಡಿ...

ಶ್ರೀ ಹೆಚ್.ಡಿ. ರೇವಣ್ಣ :- ಈ ರಾಜ್ಯದ ಸಂಪತ್ತನ್ನು ಇವರು ಲೂಟಿ ಮಾಡಿದ್ದಾರೆ.

(ಗೊಂದಲ)

ಶ್ರೀ ಜಿ. ಜನಾರ್ದನರೆಡ್ಡಿ :- ನೀವು ಲೂಟಿ ಮಾಡಿರುವವರು.

ಶ್ರೀ ಹೆಚ್.ಡಿ. ರೇವಣ್ಣ :- ನಮ್ಮದು ಏನಾದರೂ ಇದ್ದರೆ ನೀವು ಸಿ.ಬಿ.ಐ ಗೆ ವಹಿಸಿ...

(ಗೊಂದಲ)

ಶ್ರೀ ಜಿ. ಜನಾರ್ದನರೆಡ್ಡಿ :- ನಿಮಗೆ ತಾಕತ್ತು ಇದ್ದರೆ ಅದನ್ನು ತೆಗೆದು ತೋರಿಸಿ.

ಶ್ರೀ ಹೆಚ್.ಡಿ. ರೇವಣ್ಣ :- ತಾವು ಏನು ಹೇಳಿದ್ದೀರಿ ...

(ಗೊಂದಲ)

ಶ್ರೀ ಜಿ. ಜನಾರ್ದನರೆಡ್ಡಿ :- ಕಡತಗಳನ್ನು ತೆಗೆಸಿದರೆ ಗೊತ್ತಾಗುತ್ತದೆ.

(ಗೊಂದಲ)

ಡಾ॥ ಬಿ.ಎಸ್. ಯಡಿಯೂರಪ್ಪ :- ನಾನು ಮುಖ್ಯಮಂತ್ರಿಯಾಗಿ ಮಾತನಾಡುವುದಕ್ಕೆ ಎದ್ದು ನಿಂತಿದ್ದೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು :- ಮಾನ್ಯ ಸಭಾನಾಯಕರು ಮಾತನಾಡುವುದಕ್ಕೆ ಎದ್ದು ನಿಂತಿದ್ದಾರೆ. ತಾವುಗಳು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಿ. ಜನಾರ್ದನರೆಡ್ಡಿ :- ನಾನು ಕೋರ್ಟಿನಲ್ಲಿ ದಂಡ ಕಟ್ಟಿದ್ದರೆ ಆ ರಸೀದಿಯನ್ನು ಅವರು ತೋರಿಸಲಿ. ಅವರು ಅದನ್ನು ಇಲ್ಲಿ ತೋರಿಸಬೇಕು. ಇಲ್ಲದಿದ್ದರೆ ನೀವು ರಾಜೀನಾಮೆ ಕೊಡಬೇಕು. ನೀವು ಸದನಕ್ಕೆ ಸುಳ್ಳು ಹೇಳುತ್ತಿದ್ದೀರಿ. ನೀವು ರಾಜಕೀಯದಲ್ಲಿ ಇರಬಹುದು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ನಿಮ್ಮಿಂದ ನಾವು ಕಲಿಯಬೇಕಾಗಿಲ್ಲ.

(ಗೊಂದಲ)

ಶ್ರೀ ಜಿ. ಜನಾರ್ದನರೆಡ್ಡಿ :- ನಿಮ್ಮಿಂದ ಈ ರಾಜ್ಯ ಹಾಳಾಗಿಹೋಗಿದೆ. ಇಡೀ ನಿಮ್ಮ ಕುಟುಂಬದಿಂದ ಈ ರಾಜ್ಯ ಹಾಳಾಗಿ ಹೋಗಿದೆ. ನಮ್ಮಿಂದ ಇವತ್ತು ರಾಜ್ಯ ವಿಮುಕ್ತಿಯಾಗಬೇಕಿದೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ನೀವು ಇವತ್ತು ರಾಜ್ಯದ ಸಂಪತ್ತು ಲೂಟಿ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಜಿ. ಜನಾರ್ದನರೆಡ್ಡಿ :- ನೀವು ರಾಜ್ಯವನ್ನು ಲೂಟಿ ಮಾಡಿ ಶ್ರೀ ರಾಮಕೃಷ್ಣ ಹೆಗ್ಗಡೆಯವರಿಗೆ, ಶ್ರೀ ಜೆ.ಹೆಚ್.ಪಟೇಲ್‌ರವರಿಗೆ, ಶ್ರೀ ಎಸ್.ಆರ್.ಬೊಮ್ಮಾಯಿಯವರಿಗೆ, ಶ್ರೀ ಸಿದ್ದರಾಮಯ್ಯನವರಿಗೆ ಎಲ್ಲರಿಗೂ ಮೋಸ ಮಾಡಿ ಅಡ್ಡದಾರಿಯನ್ನು ಹಿಡಿದುಕೊಂಡು ನೀವು ಅಧಿಕಾರಕ್ಕೆ ಬಂದಿದ್ದವರು. ನಿಮ್ಮಿಂದ ನಾವು ಕಲಿಯಬೇಕೇ? ನಿಮ್ಮಿಂದ ಈ ರಾಜ್ಯ ಲೂಟಿಯಾಯಿತು. ಇವತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುತ್ತಿದ್ದಾರೆ. ಅವರು ಭಾಷಣವನ್ನು ಮಾಡಬೇಕು. ಮುಖ್ಯಮಂತ್ರಿಗಳ ಚರ್ಚೆಯಾಗಬೇಕು. 5,000 ರೂಪಾಯಿ ದಂಡ ಕಟ್ಟಿದ್ದಾರೆಂದು ಹೇಳಿದ್ದಾರೆ ದಯಮಾಡಿ ಆ ಬಗ್ಗೆ ತಾವು ಕಡತವನ್ನು ತೆಗೆಸಿನೋಡಿ, 5,000 ರೂಪಾಯಿ ದಂಡ ಕಟ್ಟಿದ್ದಾರೆಂದು ಅವರು ಹೇಳಿದ್ದಾರೆ. ಅವರು ನಾನು ದಂಡ ಕಟ್ಟಿರುವ ಬಗ್ಗೆ ರಸೀದಿಯನ್ನು ನಿಮಗೆ ಅವರು ತೋರಿಸಬೇಕು. ಇಲ್ಲದಿದ್ದರೆ ಅವರು ರಾಜೀನಾಮೆಯನ್ನು ಕೊಡಬೇಕು. ದಂಡ ಕಟ್ಟಿರುವಂತಹ ರಸೀದಿಯನ್ನು ತೋರಿಸಿದರೆ ನಾನು ರಾಜೀನಾಮೆಯನ್ನು ಕೊಡುತ್ತೇನೆ.

ಶ್ರೀ ಜಿ. ಕರುಣಾಕರರೆಡ್ಡಿ :- ಅವರು ರಸೀದಿಯನ್ನು ತೋರಿಸಬೇಕು ಇಲ್ಲದಿದ್ದರೆ ಅವರು ರಾಜೀನಾಮೆಯನ್ನು ಕೊಡಬೇಕು. ಇವತ್ತು ಇದು ಡಿಸೈಡ್ ಆಗಲೇಬೇಕು.

ಶ್ರೀ ಜಿ. ಜನಾರ್ದನರೆಡ್ಡಿ :- 5,000 ರೂಪಾಯಿ ದಂಡ ಕಟ್ಟಿರುವ ಬಗ್ಗೆ ಅವರು ರಸೀದಿಯನ್ನು ಅವರು ತೋರಿಸಲೇಬೇಕು, ಇಲ್ಲದಿದ್ದರೆ ಬೇರೆ ಚರ್ಚೆಯಿಲ್ಲ.

ಶ್ರೀ ಜಿ. ಕರುಣಾಕರರೆಡ್ಡಿ :- 5000 ರೂಪಾಯಿಗಳ ದಂಡವನ್ನು ಕಟ್ಟಿರುವ ಬಗ್ಗೆ ನೀವು ರಸೀದಿಯನ್ನು ತೋರಿಸಬೇಕು. ಇದು ಡಿಸೈಡ್ ಆಗಲೇಬೇಕು. ನೀವು ರಸೀದಿಯನ್ನು ತೋರಿಸಲೇಬೇಕು. ಇದನ್ನು ಬಿಟ್ಟು ಬೇರೆ ಯಾವುದು ನಡೆಯುವುದಕ್ಕಾಗುವುದಿಲ್ಲ.

ಶ್ರೀ ಜಿ. ಜನಾರ್ದನರೆಡ್ಡಿ :- ನಾನು 5000 ರೂಪಾಯಿ ದಂಡವನ್ನು ಕಟ್ಟಿದ್ದರೆ ಅದರ ರಸೀದಿಯನ್ನು ತಾವು ತೋರಿಸಿ. ಸುಳ್ಳು ಹೇಳುತ್ತೀರಾ ಈ ಸದನಕ್ಕೆ, ಸುಳ್ಳು ಹೇಳುತ್ತೀರಾ?

ಡಾ॥ ಹೆಚ್.ಸಿ. ಮಹದೇವಪ್ಪ :- ಮಾನ್ಯ ಉಪಾಧ್ಯಕ್ಷರೆ, ಸದನವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ.

ಶ್ರೀ ವಿ. ಸೋಮಣ್ಣ :- ಅಲ್ಲಾ ಸ್ವಾಮಿ ತಾವು ಯಾರಿಗೆ ಹೇಳುತ್ತಿದ್ದೀರಿ? ನಮ್ಮ ನಾಯಕರು ಮಾತನಾಡುತ್ತಿದ್ದರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುತ್ತಿದ್ದರು, ಮಧ್ಯದಲ್ಲಿ ಪದೇ ಪದೇ ಈ ರೀತಿಯಾಗಿ ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ ನಾನು ಮಾತನಾಡುತ್ತೇನೆ. ಅವರು ಗೌರವಾನ್ವಿತ ಸಚಿವರಾಗಿ ಕೆಲಸವನ್ನು ಮಾಡುತ್ತಿರುವವರು. ಅವರು ಇಲ್ಲಿಯವರೆಗೆ ಯಾವ ರೀತಿಯಾಗಿ ನಡೆದುಕೊಂಡು ಬಂದಿದ್ದಾರೆ ಅದು ಬೇರೆ ವಿಷಯ. ಸದನದೊಳಗಡೆ ಮಾತನಾಡಬೇಕಾದರೆ ಸ್ವಲ್ಪ ತಿಳುವಳಿಕೆಯಿಂದ ಮಾತನಾಡುವುದು ಸೂಕ್ತ. ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಇವತ್ತು ಚಪ್ಪಲಿಯಲ್ಲಿ ಹೊಡೆದು ಮುಖ್ಯಮಂತ್ರಿಯಾಗಿದ್ದಾರೆಂದು ಅವರು ಹೇಳುತ್ತಾರೆ.

ಶ್ರೀ ಜಿ. ಜನಾರ್ದನರೆಡ್ಡಿ :- ಅದು ಸತ್ಯ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಒಂದು ನಿಮಿಷ ಇರಿ. ಬಳ್ಳಾರಿ ಯೊಳಗೆ ಮೊನ್ನೆ ನಡೆದಂತಹ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯು ಮನೆಯೊಳಗಡೆ ನುಗ್ಗಿ ಅವರ 5-6 vehicleಗಳನ್ನು ಸುಟ್ಟು ಇವತ್ತು ಬೆದರಿಕೆಯನ್ನು ಹಾಕಿದರಲ್ಲಾ ಅದಕ್ಕಿಂತ ನೀಚ ಕೆಲಸವನ್ನು ನಾವು ಮಾಡಿಲ್ಲ.

(ಗೊಂದಲ)

ಶ್ರೀ ಜಿ. ಜನಾರ್ದನರೆಡ್ಡಿ :- ನೀವೇ ಕ್ರಿಮಿನಲ್ಸ್. ಆ idea ಗಳನ್ನು ನೀವೇ ಮಾಡಿರುತ್ತೀರಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಅದು ಅನಾವಶ್ಯಕ.

ಶ್ರೀ ಜಿ. ಜನಾರ್ಧನರೆಡ್ಡಿ :- ಆ ideaವನ್ನು ನೀವೇ ಮಾಡಿರುತ್ತೀರಿ. ನಿಮ್ಮ ಜೆಡಿ(ಎಸ್) ಅಭ್ಯರ್ಥಿ...

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಕೋರ್ಟಿನಲ್ಲಿ ಅವರಿಗೆ ದಂಡ ಹಾಕಿದ್ದಾರೋ ಇಲ್ಲವೋ ಎಂಬುದರ ಬಗ್ಗೆ ದಯವಿಟ್ಟು ತಾವು ರೂಲಿಂಗ್‌ನ್ನು ಕೊಡಬೇಕು.

(ಗೊಂದಲ)

ಶ್ರೀ ಜಿ. ಜನಾರ್ದನರೆಡ್ಡಿ :- ಅವರ ಆಭ್ಯರ್ಥಿಯನ್ನು ಕೊನೆಯ ನಿಮಿಷದಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಸಪೋರ್ಟ್ ಮಾಡುವ ರೀತಿಯಲ್ಲಿ ನೀವು ಮಾಡಿರುವುದು ಹೀನಾಯ ಪಕ್ಷ ನಿಮ್ಮದು. ಅವರ ಜೆಡಿ(ಎಸ್) ಅಭ್ಯರ್ಥಿಯನ್ನು ಚುನಾವಣಾ ಕಣದಿಂದ ವಾಪಸ್ಸು ತೆಗೆಸಿದರು, ಕಾಂಗ್ರೆಸ್ ಆಭ್ಯರ್ಥಿಗೆ ಸಪೋರ್ಟ್ ಮಾಡುತ್ತಿದ್ದವರು ಅವರು. ಹಾಗಾಗಿ ಆ ಬೆಂಕಿಯಲ್ಲಿ ಅವರೇ ಸುಟ್ಟು ಕೊಂಡಿದ್ದಾರೆ.

ಉಪಾಧ್ಯಕ್ಷರು :- ಇದು ಯಾವುದು ರೆಕಾರ್ಡ್‌ಗೆ ಹೋಗುವುದು ಬೇಡ. ದಯವಿಟ್ಟು ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರು ನೀವು ಮಾತನಾಡಿ.

ಡಾ॥ ಹೆಚ್.ಸಿ. ಮಹದೇವಪ್ಪ :- ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು. Only one minute.

ಉಪಾಧ್ಯಕ್ಷರು :- ಇಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಿದ್ದಾರೆ.

ಡಾ॥ ಹೆಚ್.ಸಿ. ಮಹದೇವಪ್ಪ :- ಮೊದಲೆ ನಾನು ತಮ್ಮನ್ನು ಮಾತನಾಡುವುದಕ್ಕೆ ಕೇಳಿದ್ದೇನೆ. ನಾನು ಏನು ಹೇಳುವುದಕ್ಕೆ ಬಯಸುತ್ತೇನೆಂದರೆ, ಈ ಸದನವು ಒಂದು ಗಂಭೀರವಾದಂತಹ ವಿಷಯವನ್ನು ಚರ್ಚೆ ಮಾಡುತ್ತಿದೆ. ಮಾನ್ಯ ಲೋಕಾಯುಕ್ತರವರು ಕರ್ನಾಟಕ ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ಮತ್ತು ಸರ್ಕಾರಿ

ಭೂಮಿ ಒತ್ತುವರಿ ಮಾಡಿರುವ ಬಗ್ಗೆ ಒಂದು ಕೂಲಂಕಷವಾದ ವರದಿಯನ್ನು ಕೊಟ್ಟಿದೆ. ಈ ವರದಿಯಲ್ಲಿ ಅನೇಕ ಅಧಿಕಾರಿಗಳು, ಅಧಿಕಾರದಲ್ಲಿರುವಂತಹ ಜನರು ಮತ್ತು ರಾಜಕಾರಣಿಗಳು ನಾವೆಲ್ಲರೂ ಸೇರಿ ನಿಷ್ಕ್ರಿಯರಾಗಿದ್ದೇವೆ. ರಾಜ್ಯದ ಸಂಪತ್ತನ್ನು ಕೆಲವೇ ಜನರು ಕಾನೂನಿನ ವಿರುದ್ಧವಾಗಿ ಲೂಟಿ ಮಾಡುತ್ತಿದ್ದಾರೆ. ಇದರಿಂದಾಗಿ ರಾಜ್ಯದ ಅಭಿವೃದ್ಧಿ ಕುಂತವಾಗುತ್ತಿದೆ. ರಾಜ್ಯದ ಬೊಕ್ಕಸ ಖಾಲಿಯಾಗುತ್ತಿದೆ. ಅದಕ್ಕೆ ನೀವು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೆಲವು ಮಾರ್ಗಸೂಚಿಗಳನ್ನು ಅವರ ವರದಿಯಲ್ಲಿ ಕೊಟ್ಟಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆ ಮಾಡುತ್ತಿದ್ದಾರೆ. ಅವರು ಒಳ್ಳೆಯ ಮಾತನ್ನು ಪ್ರಾರಂಭ ಮಾಡಿದ್ದಾರೆ. ನಿನ್ನೆ ಮತ್ತು ಮೊನ್ನೆಯಿಂದ ನಾವು ನೋಡುತ್ತಿದ್ದೇವೆ.

ಒಂದು ಐತಿಹಾಸಿಕವಾದಂಥ ತೀರ್ಮಾನವನ್ನು ಬೆಳಗಾಂನಲ್ಲಿ ಸದನದಲ್ಲಿ ಮಾಡುತ್ತೇವೆಂದು ಹೇಳಿ, ಇಲ್ಲಿ ಎರಡು ದಿವಸಗಳಿಂದ...

ಉಪಾಧ್ಯಕ್ಷರು :- ಆಯಿತು, ಬೇಗ ಮುಗಿಸಿ.

ಡಾ॥ ಹೆಚ್.ಸಿ. ಮಹದೇವಪ್ಪ :- This august House cannot be misused by a few individuals. How can they use this august House? ಎರಡು ಫ್ಯಾಮಿಲಿ, ಎರಡು ವ್ಯಕ್ತಿಗಳಿಗೆ ಸೀಮಿತವಾಗಿರುವಂಥ ಮನೆ ಇದಲ್ಲ. ಇಡೀ ರಾಜ್ಯದ ಬೊಕ್ಕಸ ಖಾಲಿ ಯಾಗುತ್ತಿದೆ. ಸರ್ಕಾರದ ಅಧಿಕಾರಿಗಳು ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿದ್ದಾರೆ. ಸರ್ಕಾರದ ಜಮೀನು ಒತ್ತುವರಿಯಾಗಿದೆ. ಅಲ್ಲಿರುವಂಥ ಅದಿರನ್ನು ಲೂಟಿ ಮಾಡುತ್ತಿದ್ದಾರೆಂದು ವರದಿ ಕೊಟ್ಟು ಸರ್ಕಾರಕ್ಕೆ ಮಾರ್ಗಸೂಚಿಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಚರ್ಚೆಯಾಗಿ ಬೆಳಕು ಚೆಲ್ಲಿದ ಮೇಲೆ ಸರ್ಕಾರ ನಿರ್ದಿಷ್ಟವಾದ ಉತ್ತರವನ್ನು ಕೊಡುವಾಗ ನಾವು ಈ ರೀತಿ ಕ್ರಮ ತೆಗೆದುಕೊಳ್ಳುತ್ತೇವೆ, ಖಾಲಿಯಾಗಿರುವ ಸರ್ಕಾರದ ಬೊಕ್ಕಸವನ್ನು ತುಂಬುವಂಥ ಕೆಲಸವನ್ನು ಮಾಡುತ್ತೇವೆ, ಯಾರು ತಪ್ಪಿತಸ್ಥರು ಇದ್ದಾರೆ, ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆನ್ನುವಂಥ ದಿಟ್ಟ ನಿಲುವನ್ನು ತಾಳಬೇಕಾಗಿದೆ. ಆ ಕಾರಣಕ್ಕಾಗಿ ನಾವು ಇಲ್ಲಿ ಸೇರಿದ್ದೇವೆ. ಅದನ್ನು ಬಿಟ್ಟು ನಾವು ನಮ್ಮ ವೈಯಕ್ತಿಕ ವಿಷಯಗಳನ್ನು emotional ಆಗಿ Mr.Reddy brothers, they are the Ministers. ಅವರಿಗೆ ತಾಳ್ಮೆ ಇರಬೇಕು. ರಾಜ್ಯ ಸಭಾ ಸದಸ್ಯರಾದ ಶ್ರೀ ಅಮರ್‌ಸಿಂಗ್‌ರವರಿಗೆ ಇವರಿಗಿಂತ ಹೆಚ್ಚು ಹಣ ಇದೆ. ಒಂದೂ ದಿವಸ ಹೀಗೆ ಮಾತನಾಡುವುದಿಲ್ಲ. ಕಷ್ಟದಿಂದ ಹಣ ಸಂಪಾದನೆ ಮಾಡಿ

ಮೇಲೆ ಬಂದವರಲ್ಲಿ submissiveness, humbleness ಇವೆಲ್ಲ ಇರಬೇಕು. ಅವರು ತಪ್ಪು ಮಾಡಿಲ್ಲವೆಂದರೆ...

(ಗೊಂದಲ)

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :- ಅವರು ಸುಳ್ಳು ಹೇಳುತ್ತಿದ್ದರೆ ನಾವು ಸುಮ್ಮನೆ ಇರಬೇಕೇ?

ಶ್ರೀ ಜಿ. ಜನಾರ್ದನ ರೆಡ್ಡಿ (ಪ್ರವಾಸೋದ್ಯಮ ಸಚಿವರು) :- ಅವರು ಸುಳ್ಳು ಹೇಳುತ್ತಿದ್ದರೆ ನಾವು ಸುಮ್ಮನೆ ಇರಬೇಕೇ?

ಡಾ॥ ಹೆಚ್.ಸಿ. ಮಹದೇವಪ್ಪ :- I have nothing against you. ನೀವು ಉತ್ತರ ಕೊಡುವಾಗ ನಿಮಗೆ ಮಾತನಾಡಲಿಕ್ಕೆ ಅವಕಾಶ ಇದೆ. Every now and then there is no need for you to get up and pick up a quarrel. Absolutely there is no need, you are a Minister, you have to listen, you have got ample time to reply. For false allegations, you have got ample time to reply. There is no need for you to become emotional. There is no question of getting up every now and then and picking up quarrel and spoiling the time of this august House.

ಶ್ರೀ ಜಿ. ಜನಾರ್ದನ ರೆಡ್ಡಿ :- ಇವತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಎಷ್ಟು ಗಂಭೀರವಾಗಿ ಮಾತನಾಡುತ್ತಿದ್ದಾರೆ. ಇದೇನಿದು. ಸುಳ್ಳು ಮಾತನಾಡುವುದು ಬೇಡ. ಸುಳ್ಳು ಹೇಳಿದರೆ ಯಾರಿಗಾದರೂ ಸಹ ಸರಿಯೆನ್ನಿಸುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು :- ವಿರೋಧ ಪಕ್ಷದ ನಾಯಕರು ಮಾತನಾಡಿ, ತಾವು ಯಾರಿಗೂ yield ಆಗಬೇಡಿ.

ಶ್ರೀ ಜಿ. ಜನಾರ್ದನ್ ರೆಡ್ಡಿ :- ಅವರು provocation ಮಾಡುವುದನ್ನು ನಿಲ್ಲಿಸಲಿ. ತಾವು ಹೇಳಿದ ಹಾಗೆ ವೈಯುಕ್ತಿಕ ವಿಚಾರಗಳನ್ನು ಮಾತನಾಡುವುದನ್ನು ಬೇಡ. ಗಣಿ ವಿಚಾರವನ್ನು ಮಾತ್ರ ಮಾತನಾಡೋಣ. Provoke ಮಾಡುವಂಥ ವಿಚಾರಗಳನ್ನು ಯಾರೂ ಮಾತನಾಡುವುದು ಬೇಡ.

ಉಪಾಧ್ಯಕ್ಷರು :- ಸದಸ್ಯರು ಕುಳಿತುಕೊಳ್ಳಿ, ಅವರು yield ಆಗಿಲ್ಲ. ಶ್ರೀನಿವಾಸ್ ಕುಳಿತುಕೊಳ್ಳಿ.

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿನಗರ) :- ಇವರಿಬ್ಬರು ಕೊಟ್ಟಿರುವುದು ತೆಗೆದುಕೊಂಡಿರುವುದು, ಇವರು ರೂಮಿನಲ್ಲಿ ಕುಳಿತುಕೊಂಡು ಏನು ಮಾತನಾಡಿದರು ಎಂಬುದರ ಬಗ್ಗೆ ಹೊರಗೆ ಹೋಗಿ ಮಾತನಾಡಿಕೊಳ್ಳಲಿ. ಇದು ಅವರ ಫ್ಯಾಮಿಲಿಗೆ ಸಂಬಂಧಪಟ್ಟಿದ್ದಲ್ಲ, ಇದು ವಿಧಾನಸೌಧ. ಎರಡು ದಿವಸಗಳಿಂದ ಇದೇ ಆಗಿಹೋಗಿದೆ. ನಮಗೆ ಬೇರೆ ಕೆಲಸವೇ ಇಲ್ಲವೆ? ನೋಡುತ್ತಿದ್ದೇವೆ. ಅವರ ಮೇಲೆ ಇವರು ಹೇಳುವುದು, ಇವರ ಮೇಲೆ ಅವರು ಹೇಳುವುದು, ಅದಕ್ಕಾಗಿಯೇ ನಾವು ಬೆಳಗಾವಿಗೆ ಬಂದಿದ್ದೇವೆಯೇ?

ಉಪಾಧ್ಯಕ್ಷರು :- ಶ್ರೀನಿವಾಸ್‌ರವರೇ ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರು ಯೀಲ್ಡ್ ಆಗಿಲ್ಲ. ನಿಮಗೆ ಅವಕಾಶ ಕೊಟ್ಟಿಲ್ಲ, ನೀವು ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರು ಯಾರಿಗೂ yield ಆಗಬೇಡಿ.

ಶ್ರೀ ಹೆಚ್.ಡಿ. ರೇವಣ್ಣ :- ಬೆಳಿಗ್ಗೆ ಬೆಂಗಳೂರು ನಗರದ ಬಗ್ಗೆ ಚರ್ಚೆ ಬಂದಾಗ ಏನೂ ಮಾತನಾಡಲಿಲ್ಲ, ಗಣಿ ಬಗ್ಗೆ ಚರ್ಚೆ ಬಂದಾಗ ಇಷ್ಟೊಂದು ನಿಗಾವಹಿಸುತ್ತಿದ್ದಾರೆ.

ಉಪಾಧ್ಯಕ್ಷರು :- ದಯವಿಟ್ಟು ನೀವು ಕುಳಿತುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :- ಉಪಾಧ್ಯಕ್ಷರೆ, ನಮ್ಮ ಚರ್ಚೆ ಒಂದು ಕಡೆ ಎತ್ತೆತ್ತಲೋ ಹೋಗಿಬಿಟ್ಟಿತು.

ಉಪಾಧ್ಯಕ್ಷರು :- ನೀವು ಯಾರಿಗೂ ಈಲ್ಡ್ ಆಗಬೇಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾನು ಈಲ್ಡ್ ಆಗುವುದಿಲ್ಲ. ಆ ಜಡ್ಜ್‌ಮೆಂಟ್ ಕಾಪಿ ನೋಡಿ ತಕ್ಷಣ ಹೇಳಿದ್ದರೆ ಈ ಪ್ರಶ್ನೆಯೇ ಬರುತ್ತಿರಲಿಲ್ಲ. ಆ judgement copy ನಿಮ್ಮ ಹತ್ತಿರ ಇದೆ. ಅದು ನಿಜವೇ, ಸುಳ್ಳೆ ಎಂಬುದು

ನಿಮಗೆ ಗೊತ್ತು. ಹಾಗಾಗಿ ತಾವು ಆಗಲೇ ಹೇಳಿದ್ದರೆ ಇದು ಮುಗಿದೇ ಹೋಗುತ್ತಿತ್ತು. ನಾನು ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಬಹಳ ವ್ಯಂಗ್ಯವಾಗಿ ಏನು ಹೇಳಿದ್ದಾರೆಂದರೆ, ಎರಡು ತಾಸಿನಲ್ಲಿ ಹೇಗೆ ವರದಿ ಕೊಟ್ಟರು? ಪಾಪ ಅದನ್ನು ಅವರಿಗೆ ಜನಾರ್ಧನ ರೆಡ್ಡಿಯವರು ಹೇಳಿಕೊಟ್ಟರು. ಇಲ್ಲದಿದ್ದರೆ ಅವರು ಎರಡು ದಿವಸವೆಂದು ಹೇಳಿ ಸುಮ್ಮನಾಗಿದ್ದರು. ಅವರು ಹೇಳಿದರು ಇಲ್ಲ ಎರಡೇ ತಾಸು ಎಂದು. ಆ ಎರಡು ತಾಸಿನಲ್ಲಿ ಅವರು ಹೇಗೆ ರಿಪೋರ್ಟ್ ಕೊಟ್ಟರು? ಎಂದರೆ ಆ ಎರಡು ತಾಸಿನಲ್ಲಿ ಆಗಿರುವ ರಿಪೋರ್ಟ್ ಅನ್ನು ಒಪ್ಪದೇ ಇರಬಹುದು,ಆದರೆ ಡಾ॥ ಪಿ.ರಾಜಶೇಖರನ್‌ರವರು ದಿನಾಂಕ 21-08-2007 ಕ್ಕೆ ಏನು ಬರೆದಿದ್ದಾರೆ? ಅದನ್ನು ನೋಡಿ, ಅವರೇನು ಬರೆದಿದ್ದಾರೆ, ಏನು ಮಾತುಗಳು ಇಲ್ಲಿ ಪ್ರಸ್ತಾಪವಾಗಿದೆ, ಇವತ್ತಿನ ದಿವಸ ಲೋಕಾಯುಕ್ತರ ವರದಿಯಲ್ಲಿ ಅದೇ ಬಂದಿದೆ. ಲೋಕಾಯುಕ್ತರು ಏನು ಪ್ರಸ್ತಾಪ ಮಾಡಿದ್ದಾರೆಂದರೆ ಶ್ರೀ ರಾಜಶೇಖರ್‌ರವರು ಏನು ಪ್ರಸ್ತಾಪ ಮಾಡಿದ್ದರು, ಸಭೆ ಮುಗಿಸಿದ ನಂತರ ಶ್ರೀ ಲಕ್ಷ್ಮಿನಾರಾಯಣ್, ಸಂಡೂರು, ಜಿ.ರಂಗನಾಥ್, ಹೊಸಪೇಟೆ ಅರಣ್ಯ ಸಂಚಾರಿ ದಳ, ಬಳ್ಳಾರಿ ಹಾಗು ಹೊಸಪೇಟೆ, ಸಂಡೂರು ವಲಯದ ಸಿಬ್ಬಂದಿಗಳು ಹಾಗು ಮೆಸರ್ಸ್ ಟಿ.ಎನ್.ಆರ್., ಮೆ॥ ಹಿಂದ್ ಟ್ರೇಡರ್ಸ್, ಹಾಗು ಮೆ॥ ಮೆಹಬೂಬ್ ಟ್ರಾನ್ಸ್‌ಪೋರ್ಟ್ ಮತ್ತು ಮೆ॥ ಎಂ.ರತ್ನಂ, ಮೈನ್ಸ್ ಮಾಲೀಕರು, ಇವರೊಂದಿಗೆ ತುಮಟಿ ಗ್ರಾಮದ ಅರಣ್ಯ ಪ್ರದೇಶದಲ್ಲಿ ಅಂತರ್ ರಾಜ್ಯ ಗಡಿ ರೇಖೆಗಳನ್ನು ಪರಿಶೀಲಿಸಿದಾಗ ಮೆ॥ ಓಬಳಾಪುರಂ ಮೈನಿಂಗ್ ಕಾರ್ಪೋರೇಷನ್ ಲಿಮಿಟೆಡ್ ಇವರು ಸುಮಾರು 20 ಎಕರೆ ಜಮೀನನ್ನು ಒತ್ತುವರಿ ಮಾಡಿ ಹೊಸ ಒಂದು ಸಿಮೆಂಟಿನ ಪಿಲ್ಲರ್ ಅನ್ನು ನಿರ್ಮಿಸಿರುವುದು ಮತ್ತು ತಿಮ್ಮಪ್ಪ ಗುಡ್ಡ ಕರ್ನಾಟಕ ಅರಣ್ಯ ಪ್ರದೇಶದಲ್ಲಿ ಗಡಿ ಕಲ್ಲನ್ನು ಸ್ಫೋಟಿಸಿರುವುದು ಕಂಡುಬರುತ್ತದೆ, ಅಂದರೆ ಹೊಸದಾಗಿ ಬಾರ್ಡರ್ ಹಾಕಿದರು, ಅಲ್ಲಿ ಬ್ರಿಟಿಷರ ಕಾಲದಲ್ಲಿ ಹಾಕಿದ್ದ ಪಿಲ್ಲರನ್ನು ಒಡೆದು ಹಾಕಿ ಹೊಸ ಪಿಲ್ಲರ್ ಅನ್ನು ಸೃಷ್ಟಿ ಮಾಡಿ ಗಡಿಯನ್ನು ಬದಲಾಯಿಸಿದ್ದಾರೆ ಎನ್ನುವ ವಿಷಯ ಬಂದಿತು. ಇವನು ಸರಿಯಿಲ್ಲ, ಇವನು ಲಂಚಕೋರ, ಇವನು ಹಾಗೆ ಎಂದು ಜನಾರ್ದನ ರೆಡ್ಡಿಯವರು ಹೇಳಿದರು. ಇವರನ್ನು ಲಂಚಕೋರರೆಂದು ಒಪ್ಪಿಕೊಳ್ಳೋಣ ಆದರೆ ಸಂತೋಷ್ ಹೆಗ್ಡೆಯವರು ತಮ್ಮ ವರದಿಯಲ್ಲಿ ಏನು ರಿಪೋರ್ಟ್ ಕೊಟ್ಟಿದ್ದಾರೆ ಅದನ್ನು ಓದುತ್ತೇನೆ, "The interstate border area has been fully traversed by me and the survey team from one corner to

the other taking Bellary Reserve Forest map and Topo sheet as basis. During the field verification it is found that the ಖ rock marks" from point A (longitude and latitude (76 50 44: 15 04 16) to point C (longitude and latitude 76 48 9.3: 50 05 42.7) are destroyed and there are no rock marks available on the ground. These rock marks are destroyed due to mining or road formation. Likewise the rock marks from point D to E to F are also missing (sketch page No.127a and 127b). A rock mark and a cemented pillar has been 'created' at point B which I feel is recent one". ಮಾನ್ಯ ಮುಖ್ಯಮಂತ್ರಿಗಳೇ, ಇದು ಸುಳ್ಳು, ಎರಡು ತಾಸಿನಲ್ಲಿ ಹೋಗಿ ನಮ್ಮ ಪಾರ್ಟಿಯವರು ತಂದರು, ಅವರ ಮೇಲೆ ನಿಮಗೆ ನಂಬಿಕೆ ಇಲ್ಲ. ಈ ವರದಿಯ ಇದರ ಮೇಲೆ ನಂಬಿಕೆ ಇದೆಯಲ್ಲವೇ, ಇದನ್ನು ಯಾರು ಮಾಡಿದರು? ಇದನ್ನು ಮಾಡುವುದಲ್ಲದೇನೇ ಮುಂದೆ ಹೇಳುತ್ತಾರೆ ಇದರಲ್ಲಿ "The sketches of mines which are having common boundary with the interstate border are prepared and approved based on the Bellary Reserve Forest map. The GTS points at Sugguammagudda hillock (Andhra Pradesh) and Thimmappannagudda hillock (Karnataka) have been destroyed during the course of mining. The M/s Oblapuram Mining Company (p) Ltd., (OMC) (Andhra Pradesh) has started the mine operation in 2007-08. ಇದನ್ನು ಕೇಳಬೇಕು ಅಧ್ಯಕ್ಷರೆ, ಮುಖ್ಯಮಂತ್ರಿಗಳು ಇದನ್ನು ಕೇಳಬೇಕು.

ಉಪಾಧ್ಯಕ್ಷರು :- ದಯವಿಟ್ಟು ಸದಸ್ಯರು ಮಾತನಾಡಬೇಡಿ, ಪ್ಲೀಸ್, ವಿಪ್‌ರವರೇ ಸ್ವಲ್ಪ ಕಂಟ್ರೋಲ್ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ನೀವು ಕೇಳಬೇಕು. ಮಾನ್ಯ ಮುಖ್ಯಮಂತ್ರಿಗಳೇ, ನೀವು ಕೇಳಬೇಕು. ಯಾವ report ಇದು. ಯಾರದು ಈ report ಎಂದು ಹೇಳಬೇಕು. ಎದೆ ಮೇಲೆ ಕೈಯಿಟ್ಟುಕೊಂಡು ಮಾನ್ಯ ಮಂತ್ರಿಗಳು ಹೇಳಿದರು, "ನಾನೊಬ್ಬನೇ Director ಅದರಲ್ಲಿ, ಬೇರೆ ಯಾರು Director ಇಲ್ಲ. ಆ ಕಂಪನಿ ನನ್ನದು. ಆ ಕಂಪನಿಯನ್ನು 2007ರಲ್ಲಿ ನಾನು ತೆಗೆದುಕೊಂಡಿದ್ದೇನೆ" ಎಂದು ಹೇಳಿದರು. ಆದರೆ, ಈ report ಅನ್ನು ನಾನು ಕೊಟ್ಟಿದ್ದು, ನಮ್ಮ ಕಾಂಗ್ರೆಸ್ ಪಾರ್ಟಿಯಿಂದ. ಇವರು ಎರಡೇ ತಾಸಿನಲ್ಲಿ ತಂದರು. ಈ ದೇಶದಲ್ಲಿ ಕೇವಲ 4 ವರ್ಷದಲ್ಲಿ ಸಾವಿರಾರು ಕೋಟಿ ದುಡ್ಡನ್ನು ಮಾಡಬಹುದು ಎಂದರೆ, at least ಒಬ್ಬ ಮನುಷ್ಯ ಹೋಗಿ ಎರಡು ತಾಸಿನಲ್ಲಿ report ತರುವುದಕ್ಕಾಗುವುದಿಲ್ಲವೇ? ಒಂದು ತಾಸಿನಲ್ಲಿ ಓದುವುದಕ್ಕಾಗುವುದಿಲ್ಲವೇ? ದಯವಿಟ್ಟು, ಇದನ್ನು ನೋಡಿ, ಎಲ್ಲಿದೆ ನನ್ನ ಹೆಸರು? ಯಾವ report ನಲ್ಲಿ ಇದೆ ಎಂದು ಕೇಳಿದಿರಿ. ಇಲ್ಲಿ ಇದೆ ನೋಡಿ. ಏನು ಇದೆ? ನಾನು ಹೇಳಿದ್ದಲ್ಲ ಇದು. ಸಂತೋಷ್ ಹೆಗ್ಡೆ, Retired Supreme Court Judge. ಯಾರ ಮೇಲೆ ನಮ್ಮೆಲ್ಲರ ಬಹಳ ನಂಬಿಕೆ ಇದೆಯೆಲ್ಲಾ, ಅವರೇ ಕೊಟ್ಟಿದ್ದು. ಅದಕ್ಕಾದರೂ, respect ಕೊಡುತ್ತೀರೊ ಅಥವಾ ಇಲ್ಲವೋ? "The M/s.Oblapuram Mining Company (P) Ltd., (OMC) (Andhra Pradesh) has started the mining operation in 2007-08. In the process of mining the lessee or raising contractor have crossed the interstate border by forming network of roads to link with the mine pit heads of M/s Hind Trades (HT). The M/s Hind Traders once complained that M/s. OMC is extracting the iron ore from his lease illegally. These mine roads are formed by crossing the interstate border and to that extent the

lessee (OMC) has encroached the forest land and also the leased area of M/s.Hind Traders." ಯಾವುದು ಸ್ವಾಮಿ ಇದೆ? ಇದು ನಾವು ಕೊಟ್ಟ report ಏನು? ಲೋಕಾಯುಕ್ತದವರು ಕೊಟ್ಟಂಥ reportಅನ್ನು ನೀವು ನಂಬುವುದಿಲ್ಲ. Fact Finding Committee ಎಂದು ನಮ್ಮವರು ಹೋದರೂ ನೀವು ನಂಬುವುದಿಲ್ಲ. ನಿಮ್ಮ ಆಫೀಸರ್ ಬರೆದಂಥ ಪತ್ರವನ್ನು ನೀವು ನಂಬುವುದಿಲ್ಲ. ಯಾವುದನ್ನು ನಂಬುತ್ತೀರಿ ನೀವು? ಇದು ಎಲ್ಲಾ ಬರುತ್ತದೆ ಎಂದು ತಿಳಿದುಕೊಂಡು ಕೊನೆಗೆ ಏನು ಮಾಡಿದಿರಿ. ಹಿಂದೂ ಪೇಪರ್‌ನಲ್ಲಿ ನಿನ್ನೆ ಬಂದ ವಿಷಯವನ್ನು ನಾನು ಪ್ರಸ್ತಾಪ ಮಾಡಿದ ತಕ್ಷಣವೇ, ನೀವು ಹೇಳಿಬಿಟ್ಟಿರಿ, ಅದು ಎಲ್ಲಾ ಸುಳ್ಳು, ಸತ್ಯಕ್ಕೆ ದೂರವಾಗಿರತಕ್ಕಂಥಾದ್ದು ಎಂದು. ಇವತ್ತು ಅವರು ಬರೆದಿರುವುದು ಏನೆಂದರೆ, "However the Hindu sources confirmed on Wednesday that the new report was indeed prepared and a meeting was held last week where Principal Chief Conservator of Forest Dilip Kumar refused to sign it. The new report was signed by PCCF Nagaraj on Monday. The report has been kept confidential. ಅಂದರೆ, ತಾವು ಈ ಸದನದಲ್ಲಿ ಒಪ್ಪಿಕೊಳ್ಳಿ. ನಿಮಗೆ ಏನು ಆಗಬೇಕಾಗಿದೆ?

ಡಾ॥ ಬಿ.ಎಸ್. ಯಡಿಯೂರಪ್ಪ :- ಸ್ವಾಮಿ, ಒಂದು ನಿಮಿಷ ನಾನು ಮಾತನಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಸ್ವಾಮಿ, ನೀವು hit and run ಮಾಡುತ್ತೀರಿ ಎಂದು ನನಗೆ ಗೊತ್ತು. ನಾನು ಮೊದಲು ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

ಡಾ॥ ಬಿ.ಎಸ್. ಯಡಿಯೂರಪ್ಪ :- ಒಂದು ನಿಮಿಷ ಸ್ವಾಮಿ, ನಾನು ಜವಾಬ್ದಾರಿಯುತವಾದ ಸ್ಥಾನದಲ್ಲಿದ್ದೇನೆ. ತಾವು ಹಿಂದೂ ಪತ್ರಿಕೆಯನ್ನು refer ಮಾಡಿದ್ದೀರಿ. ನಿನ್ನೆ ಕುಮಾರಸ್ವಾಮಿಯವರು refer ಮಾಡಿದ್ದರು. ಏಕೆಂದರೆ, ರಾಜ್ಯದ ಜನತೆಗೆ ಸತ್ಯ ಗೊತ್ತಾಗಬೇಕು. ನಾನು ಮುಚ್ಚಿಡುವುದು ಏನೂ ಇಲ್ಲ. ನಾನು ನಿನ್ನೆ

ದಿವಸ ಎಸ್.ನಾಗರಾಜು, PCCF ಅವರ ಬಗ್ಗೆ ನಮ್ಮ ಅಧಿಕಾರಿಗಳನ್ನು ಸಂಪರ್ಕ ಮಾಡಿ ಮಾತನಾಡಿದ್ದೇನೆ. ಹಿಂದು ಪತ್ರಿಕೆಯಲ್ಲಿ ಈ ರೀತಿ ಬಂದಿದೆಯಲ್ಲಾ ಏನು ಎಂದು ಕೇಳಿದ್ದೇನೆ. ವಾಸ್ತವಿಕ ಸತ್ಯಾಂಶ ಏನು? ಇವತ್ತು "To the Editor, The Hindu, Bangalore. Report in the Hindu on 21st January 2009 regarding fresh report giving clean check to mining company. With reference to the subject cited above, I would like to clarify certain factual errors reported in your esteemed daily news paper regarding Hon'ble Lokayukta's Report on mining irregularities.

(1) As reported in your daily on 21st Jan. 2009, the forest department has not sent any report to the Government on the Hon'ble Lokayukta's Report regarding the mining irregularities including the border dispute between Karnat' ' . and Andhra Pradesh states on the land ', ., as mining lease by M/s.Obalapuram Minin :ompany. Also I would like to inform you ..at the Government has not sought such report from this office.

(2) Further, I would also like to bring to your kind notice that the Department has set up a senior level officer's committee to take immediate action on the findings of Hon'ble Lokayukta's Report, covering Chitradurga, Tumkur, Bellary and other places in the state and to submit Action Taken Report by 15th Feb. 2009.

(3) Further, I would like to clarify that as reported in your daily on 22nd January 2009, the Department has not prepared any new report which was not signed by me or my predecessor. Therefore, signing any such new report by me as mischievously reported in your daily does not arise.

You are therefore, requested to clarify these issues in your esteemed daily to remove any confusion or misconception in the minds of the public. "ಶ್ರೀ ಎಸ್.ನಾಗರಾಜ ರವರು ಇಂದು ಹಿಂದೂ ಪತ್ರಿಕೆಗೆ ಪತ್ರ ಬರೆದಿದ್ದಾರೆ.

ಶ್ರೀ ಆರ್. ರೋಷನ್‌ಬೇಗ್ :- ಇದರ ಮೇಲೆ ತಾವು ಕೇಸ್ ಹಾಕಬೇಕು. ಹಿಂದೂ ಪೇಪರ್ ಮೇಲೆ ತಾವು ಒಂದು defamation ಕೇಸ್ ಹಾಕಿ.

ಡಾ॥ ಬಿ.ಎಸ್. ಯಡಿಯೂರಪ್ಪ :- ನಾನು ಏನು ಹೇಳುತ್ತೇನೆ ಎಂದು ಸ್ವಲ್ಪ ಕೇಳಿ. ನಿನ್ನೆ ಹಿಂದು ಪೇಪರ್ refer ಮಾಡಿದ ಮೇಲೆ ಅಧಿಕಾರಿಯನ್ನು, ನಮ್ಮ ಅಧಿಕಾರಿ ಸಂಪರ್ಕ ಮಾಡಿದರು. ಅವರು ಹಿಂದೂಗೆ ಬರೆದ ಪತ್ರವನ್ನು ನಾನು ನಿಮ್ಮ ಮುಂದೆ ಇಟ್ಟಿದ್ದೇನೆ. ನೀವು ಏನು ಬೇಕಾದರೂ ಅರ್ಥ ಮಾಡಿಕೊಳ್ಳಬಹುದು. That is my duty.

ಶ್ರೀ ಮಲ್ಲಿಕಾರ್ಜುನ ಖರ್ಗೆ :- It is your duty to clarify, if he is Hindu Editor or Sub-Editor he could have signed it. ಇದು ಆಫೀಸರ್ reaction. ನೀವು ಕೇಳಿದ್ದೀರಿ, ಅವರು ಕಳುಹಿಸಿದ್ದಾರೆ.

(ಗೊಂದಲ)

ಆಮೇಲೆ ತಮ್ಮ ಗಮನಕ್ಕೆ ತರುತ್ತೇನೆ. ತಾವು ಓದಿರುತೀರಿ. ಪೇಪರ್ ಕಟಿಂಗ್ ಮಾಡಿ ಕೊಟ್ಟೇ ಕೊಡುತ್ತಾರೆ. ಇವತ್ತಿನ ದಿವಸ ಅವರು ನಿಮ್ಮ ಗಮನಕ್ಕೆ ತರುತ್ತಾರೆ. ಆಮೇಲೆ, ಸುರೇಶ್‌ರವರೇ, ನೀವು wrong advice ಮಾಡಬೇಡಿ. ಅವರು ಸರಿಯಿಲ್ಲ. ಅದು ಒಬ್ಬ ಆಫೀಸರ್ ಕೊಟ್ಟಂಥ letter.

ಶ್ರೀ ಬಸವರಾಜ್ ಬೊಮ್ಮಾಯಿ :- ಆಫೀಸರ್ ಯಾವಾಗ posting ಆಗಿದ್ದರು? posting ಮಾಡಿದ್ದೀರಿ, report ತರಿಸಿಕೊಂಡಿದ್ದೀರಿ. ಯಾವ ಯಾವ ಸರ್ಕಾರದಲ್ಲಿ, ಯಾವ್ಯಾವ ಆಫೀಸರ್‌ನಿಂದ report ತರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೇ? The same logic can be extended.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನೀವು ಉತ್ತರ ಕೊಡುವುದನ್ನು ಕೊಡಿ. ಈಗ ನಮ್ಮಲ್ಲಿರತಕ್ಕಂಥ ಮಾಹಿತಿಯನ್ನು ನಾವು ಸದನದ ಮುಂದೆ ಇಡುತ್ತೇವೆ. ಅದನ್ನು report ಮಾಡುವುದು, ಸತ್ಯಾಂಶವಿಲ್ಲವೆಂದು ಹೇಳುವುದು, ಸತ್ಯಕ್ಕೆ ದೂರವಾದ ಅಂಶಗಳು ಎಂದು ಹೇಳುವುದು. ನೀವು ಹೇಳಿ, ಸದನಕ್ಕೆ convince ಮಾಡಿ, ಜನರಿಗೆ convince ಮಾಡಿ. ಆದರೆ, ನಿನ್ನೆ ಬಂದಂಥ ಹಿಂದೂ report, ಪುನ: ಇವತ್ತು ಅವರು confirm ಮಾಡಿದ್ದು, No fresh report ಅನ್ನುವುದು ಬಂದಿದೆ. ನಿಮ್ಮವರು ಕೊಟ್ಟಿದ್ದು, ಬಂದಿದೆ. No fresh report ಎಂದು ಹೇಳಿ, ಅವರ commentsಅನ್ನು ಕೂಡ ಬರೆದಿದ್ದಾರೆ. ಏನು ಬರೆದಿದ್ದಾರೆ ಎಂದರೆ, ಹೊಸ report ಇಲ್ಲವೆಂದು, ಮಾನ್ಯ ಮುಖ್ಯಮಂತ್ರಿಗಳು ಹೇಳಿದರೂ ಕೂಡ, ಇದರಲ್ಲಿ ಸತ್ಯಾಂಶವಿದೆ. ಇದನ್ನು ಸೋಮವಾರ ಬರೆದಿದ್ದಾರೆ ಎನ್ನುವ ಮಾತನ್ನು ಪುನಃ ಅವರು ಹೇಳಿದ್ದಾರೆ. ಅದಕ್ಕೆ ಈ ವಿಷಯವನ್ನು ಪ್ರಸ್ತಾಪ ಮಾಡಿರುವುದು. ಇದರ ಮೇಲೆ authenticity ಇಲ್ಲದೆ, ಇವತ್ತು ಲೋಕಾಯುಕ್ತದವರು ಕೂಡ comment ಮಾಡುತ್ತಿರಲಿಲ್ಲ. ಆದರೆ, something ಏನಾದರೂ authenticity ಇದ್ದು, ಸತ್ಯಾಂಶ ಇದ್ದಾಗ ಮಾತ್ರ ಎಲ್ಲೋ ಒಬ್ಬರು ಸಂತೋಷ್ ಹೆಗ್ಡೆಯವರಂಥವರು ಕೂಡ ಅದಕ್ಕೆ rebut ಮಾಡುತ್ತಾರೆ. ಅವರು ಏನು ಹೇಳುತ್ತಾರೆಂದರೆ, ರಾಜ್ಯ ಸರ್ಕಾರದಿಂದ ಪ್ರತ್ಯೇಕ ವರದಿ, ಲೋಕಾಯುಕ್ತರಿಂದ ತೀವ್ರ ಆಕ್ಷೇಪ, ಏನು ಅಕ್ರಮ ಗಣಿಗಾರಿಕೆ ಕುರಿತು ತಾವು ಸಲ್ಲಿಸಿರುವ ವರದಿಗೆ ತದ್ವಿರುದ್ಧವಾಗಿ ರಾಜ್ಯ ಸರ್ಕಾರ ಪ್ರತ್ಯೇಕ ವರದಿ ರೂಪಿಸಿರುವುದಕ್ಕೆ ಲೋಕಾಯುಕ್ತದವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸಂಸ್ಥೆ ಬಗ್ಗೆ ವಿಶ್ವಾಸವಿಲ್ಲದಿದ್ದರೆ, ಸರ್ಕಾರ ತನಿಖೆಗೆ ವಹಿಸಿರುವ ಇತರೆ ಪ್ರಕರಣಗಳನ್ನು ವಾಪಸ್ಸು ಪಡೆಯಲಿ ಎಂದು ಹೇಳಿದ್ದಾರೆ. ಇಷ್ಟು ತೀಕ್ಷ್ಣವಾಗಿ ಅವರು ನಡೆದುಕೊಳ್ಳಬೇಕಾದರೆ, ಏನಾದರೂ ಮಾಹಿತಿ ಇಲ್ಲದಿದ್ದರೆ, ಅವರು apology ಕೇಳಬೇಕಾಗುತ್ತದೆ. ತಪ್ಪು ಮಾಹಿತಿಯನ್ನು ಸದನಕ್ಕೆ ಕೊಟ್ಟು, ...

ಡಾ|| ಬಿ.ಎಸ್. ಯಡಿಯೂರಪ್ಪ :- ಇದನ್ನು ಬರೆದವರು, ಇವತ್ತು ಲೋಕಾಯುಕ್ತಕ್ಕೂ ಕಾಪಿ ಕಳುಹಿಸಿದ್ದಾರೆ. ಎಲ್ಲರಿಗೂ ಕಾಪಿ ಕಳುಹಿಸಿದ್ದಾರೆ. ನಾಳೆ ಸತ್ಯ ಏನು ಎಂದು ಗೊತ್ತಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಆಯಿತು ಸ್ವಾಮಿ. ನಿಮಗೆ ಬಂದಿದ್ದು, ನನಗೂ ಬರುತ್ತದೆಯೋ? ಆದರೆ, ಒಂದು ಹೇಳಿಬಿಡಿ. ಮಾನ್ಯ ಮುಖ್ಯ ಮಂತ್ರಿಗಳಿಗೆ ಬರೆದಂಥ ಎಲ್ಲವನ್ನು ಒಂದು ಕಾಪಿ ವಿರೋಧ ಪಕ್ಷದ ನಾಯಕರಿಗೂ ಕೊಡಿ ಎಂದು ಹೇಳಿದರೆ, ಎಲ್ಲಾ ನನಗೆ ಬರುತ್ತೆ. ಎಲ್ಲಾ ನಾನು ಹೇಳುತ್ತೇನೆ. ಇವತ್ತಿನ ಪರಿಸ್ಥಿತಿ ಪ್ರಕಾರ ಲೋಕಾಯುಕ್ತರೇ ಸ್ವತ: ಈ ಮಾತನ್ನು ಹೇಳಿದ್ದಾರೆ. ಅಕ್ರಮ ಗಣಿಗಾರಿಕೆ ಕುರಿತು ಮಧ್ಯಂತರ ವರದಿಯಲ್ಲಿ, ಕರ್ನಾಟಕ ಆಂಧ್ರಪ್ರದೇಶ ಅಂತರ್‌ರಾಜ್ಯ ಗಡಿಯಲ್ಲಿ ನಡೆದಿರುವ ಒತ್ತುವರಿ ಬಗ್ಗೆ ಕೇಂದ್ರ ಸರ್ಕಾರದಿಂದ ಜಂಟಿ ಸಮೀಕ್ಷೆಯನ್ನು ನಡೆಸಬೇಕೆಂದು ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಶಿಫಾರಸ್ಸು ಮಾಡಿದ್ದರು. ಬಿ.ಜೆ.ಪಿ. ಸರ್ಕಾರದಲ್ಲಿ ಸಚಿವರಾಗಿದ್ದ ಜನಾರ್ದನರೆಡ್ಡಿ, ಜಿ.ಕರುಣಾಕರರೆಡ್ಡಿ ಮತ್ತು ಬಿ.ಶ್ರೀರಾಮುಲುರವರು ನಿರ್ದೇಶಕರಾಗಿರುವ ಓಬಳಾಪುರಂ ಮೈನಿಂಗ್ ಕಂಪನಿ ಅಕ್ರಮ ಗಣಿಗಾರಿಕೆ ನಡೆಸಿರುವ ಬಗ್ಗೆ ವರದಿಯಲ್ಲಿ ಪ್ರಸ್ತಾಪಿಸಲಾಗಿತ್ತು. ಆದರೆ, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ನಿರ್ದೇಶನದ ಮೇರೆಗೆ ಅರಣ್ಯ ಇಲಾಖೆಯ ಅಧಿಕಾರಿಗಳು ಇದಕ್ಕೆ ಪ್ರತ್ಯೇಕವಾದ ವರದಿಯನ್ನು ರೂಪಿಸಿದ್ದು, ಸಚಿವರ ಕಂಪನಿಯನ್ನು ಆರೋಪ ಮುಕ್ತಗೊಳಿಸಲಾಗಿದೆಯೆನ್ನಲಾಗಿದೆ.

ಯಾವ ರೀತಿಯಾಗಿ ನೀವು ನಿರಾಕರಿಸಿದ್ದೀರಿ ಆದರೆ, ಲೋಕಾಯುಕ್ತದವರು ಇದನ್ನು ಪುಷ್ಟೀಕರಿಸಿದ್ದಾರೆ. ಒಂದು ವೇಳೆ ಅವರು ಪ್ರತ್ಯೇಕವಾದ report ಅನ್ನು ತರಬೇಕಾಗಿತ್ತೆಂದರೆ, ಲೋಕಾಯುಕ್ತದವರಿಂದ report ಅನ್ನು ಕೊಡಿ ಎಂದು ಹೇಳುವ ಅವಶ್ಯಕತೆ ಏನಿತ್ತು ಎಂದು ಹೇಳುವ ಅಭಿಪ್ರಾಯವನ್ನು ಲೋಕಾಯುಕ್ತರು ವ್ಯಕ್ತಪಡಿಸಿರುವುದು ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಪ್ರಜಾವಾಣಿ, ಕನ್ನಡ ಪ್ರಭ, ಹಿಂದೂ ಪತ್ರಿಕೆಗಳಲ್ಲಿ ಬಂದಿದೆ. ಬೇರೆ ಬೇರೆ ಪತ್ರಿಕೆಗಳಲ್ಲಿಯೂ ಸಹ ಸಣ್ಣದಾಗಿ ಬಂದಿದೆ. ಆ ವರದಿಗಳು ತಮ್ಮ ಮುಂದೆ ಸಹ ಇದೆ. ಈಗ ನಾನು ಪ್ರಸ್ತಾಪ ಮಾಡುತ್ತಿರುವುದು ಇಷ್ಟೆ. ಅದೇನೆಂದರೆ, ನಮ್ಮ ಪಕ್ಷದಿಂದ ನಾವೇನು ಸತ್ಯ ಶೋಧನ ಸಮಿತಿಯ ವರದಿಯನ್ನು ಕಳುಹಿಸಿದ್ದೇವೆ ಅದನ್ನು ತಾವು ಸಾರಸಗಟಾಗಿ ನಿರಾಕರಿಸಿದ್ದೀರಿ. ಆದರೆ, ಕನಿಷ್ಠ ಪಕ್ಷ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು ಕೊಟ್ಟಿರುವ ವರದಿಯನ್ನಾದರೂ ಒಪ್ಪುತ್ತೀರೋ ಇಲ್ಲವೋ? ಈ ವರದಿಯನ್ನು ತಾವು ಸತ್ಯ ಎಂದು

ಭಾವಿಸಿದರೆ, ಇದರಲ್ಲಿ ಸತ್ಯಾಂಶ ನಿಷ್ಪಕ್ಷಪಾತವಾಗಿ ಇದೆಯೆಂದರೆ, ಆಗ ಮಾನ್ಯ ಸಚಿವರಾದ ಜನಾರ್ದನ ರೆಡ್ಡಿಯವರು ಆತುರವಾಗಿ ಹೇಳಿದರು. ನಾನು ಯಾವುದೇ ಗಣಿಗಾರಿಕೆಯಲ್ಲಿ ಭಾಗಿಯಾಗಿಲ್ಲ. ಅಲ್ಲಿ border ನಲ್ಲಿ ಏನು ಆಗಿಲ್ಲ. ಕಲ್ಲು ತೆಗೆದಿಲ್ಲ, ಕಿತ್ತು ಹಾಕಿಲ್ಲ ಎಂದು ಏನು ಸಮರ್ಥನೆ ಮಾಡಿಕೊಂಡರು, ಈ ವರದಿ ಪ್ರಕಾರ ಅಲ್ಲಿ ಮಾಡಿದ್ದಾರೆಂದು ಹೇಳಿದ ಮೇಲೆ ಇದನ್ನು ತಾವು ಸಿ.ಬಿ.ಐಗೆ ಒಪ್ಪಿಸಬೇಕಾ ಅಥವಾ ನೀವೇ ವಿಚಾರಣೆ ಮಾಡುತ್ತೀರಾ? ಇಂತಹ issues ಇದ್ದ ಕಾರಣ ನಾವು ಹೇಳುತ್ತಿದ್ದೇವೆ. ಎಲ್ಲಿ ಮಂತ್ರಿಗಳು ಸ್ವತಃ ಆ ಕಂಪನಿ Director ಆಗಿ involve ಇದ್ದಾರೋ, ಇಲ್ಲಿ ನಮ್ಮ ಮುಂದೆ ಲೋಕಾಯುಕ್ತರ ವರದಿ ಇದೆ. ಆ ವರದಿಯನ್ನು ತಿರುಚಿ ಮುರುಚಿ ಮಾಡುವುದಕ್ಕೆ ಇನ್ನೊಬ್ಬ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ಹೇಳಿದಿರಿ ಇವೆಲ್ಲಾ ಸಹ ಹೊರಗಡೆ ಬರುತ್ತಿವೆ. ಸತ್ಯಕ್ಕೆ ದೂರವಾದಂತಹ ಈ ಮಾತುಗಳಿದ್ದರೆ ಖಂಡಿತವಾಗಿ ತಾವು ಈ ಹಿಂದೂ ಪತ್ರಿಕೆ ಮೇಲೆ ಕೇಸ್ ಹಾಕಬೇಕಾಗಿತ್ತು. ಇಲ್ಲ ಸತ್ಯಕ್ಕೆ ದೂರವಾದಂತಹ ವರದಿಯನ್ನು ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯವರು ಕೊಟ್ಟಿದ್ದರೆ, ಅವರಿಗೆ ಏನು ಶಿಕ್ಷೆ ಕೊಡುತ್ತೀರೋ ಕೊಡಿ. ತಾವು ಕೇಳಿದಿರಿ, ಯಾವ ವರದಿಯಲ್ಲಿ ಬಂದಿದೆ, ಎಲ್ಲಿ ಬಂದಿದೆ, ನನ್ನ ಹೆಸರು ಎಂದು ಪ್ರಸ್ತಾಪ ಮಾಡಿದಿರಿ. ಓಬಳಾಪುರ ಮೈನ್ಸ್‌ನವರು ಇದನ್ನು ಒತ್ತುವರಿ ಮಾಡಿಲ್ಲ ಅಥವಾ Border area alter ಮಾಡಿಲ್ಲ ಎಂದು ಹೇಳಿದರು. ಈ ಬಗ್ಗೆ ನಮ್ಮ ಕಂಪನಿಯ ವಿಷಯ ಎಲ್ಲಿ ಬಂದಿದೆ ಎಂದು ಕೇಳುತ್ತಿದ್ದರು. ಅದಕ್ಕೆ ಆ ಬಗ್ಗೆ ವರದಿ ಇಲ್ಲಿದೆ. ಆ ವರದಿಯಲ್ಲಿ ನಿಮ್ಮ ಹೆಸರು ಇದೆ. ಹೆಸರು ಎಂದರೆ ವೈಯಕ್ತಿಕವಾಗಿ ಅಲ್ಲ, ತಮ್ಮ ಕಂಪನಿಯ ಹೆಸರಿದೆ. ಆ ಕಂಪನಿಯ ಮಾಲೀಕರು ಯಾರು ಎನ್ನುವುದನ್ನು ಬಹಳ ಆವೇಶದಿಂದ ತಾವೇ ಎದೆ ಬಡಿದುಕೊಂಡು ಹೇಳಿದಿರಿ. ಅದಕ್ಕೆ ತಾವು ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇದನ್ನು ಒಪ್ಪಿಕೊಂಡ ಮೇಲೆ ಇದನ್ನು ತಾವು ಸಿ.ಬಿ.ಐ ವತಿಯಿಂದಲೇ ವಿಚಾರಣೆ ಮಾಡಿಸಬೇಕಾಗುತ್ತದೆ. ಬೇರೆ ಯಾರಿಂದಲೂ ವಿಚಾರಣೆ ಮಾಡಿಸಿದರೆ ನಮಗೆ ಗೊತ್ತಾಗುವುದಿಲ್ಲ. ಈ Borderನಲ್ಲಿ ಆಗಿರುವಂಥದ್ದು ಸರಿಯೋ ತಪ್ಪೋ? ಎಷ್ಟು ಕಿ.ಮೀ ಒಳಗಡೆ ಬಂದಿದ್ದಾರೆ? ಎಷ್ಟು ಕಿ.ಮೀ.ನಲ್ಲಿ ಗಣಿಗಾರಿಕೆಯಾಗಿದೆ? ಎಷ್ಟು ಟನ್ transport ಆಗಿದೆ? ಎಷ್ಟು ಟನ್ ಪೋರ್ಟ್‌ನಿಂದ ಅದಿರು ಹೋಗಿದೆ? ಅನೇಕ ರೀತಿಯಿಂದ ನಿಮ್ಮ ಕಂಪನಿಗೆ ಇದರಿಂದ ಬಂದಂತಹ ಹಣ ಮೈನಿಂಗ್‌ನಿಂದ ಬಂದಿದೆಯೋ ಅಥವಾ ಬೇರೆ ಬೇರೆ ಮೈನ್ಸ್‌ನಿಂದ ಬಂದಿದೆಯೋ, ಯಾವ ಯಾವ

ರೀತಿಯಾಗಿ ಹಣ ಬಂದಿದೆ ಎನ್ನುವುದು ಬಹಿರಂಗವಾಗುತ್ತದೆ. ತಮ್ಮದೊಂದೇ ಅಲ್ಲ, ಇದೇ ರೀತಿಯಾಗಿ ಮೈನಿಂಗ್ ಮಾಡುತ್ತಿರುವ ಸುಮಾರು 93 ಕಂಪನಿಗಳು ಮೈನಿಂಗ್ operation ಮಾಡುತ್ತಿರತಕ್ಕಂಥದ್ದು ನಮ್ಮ ರಾಜ್ಯದಲ್ಲಿದೆ. ಅದರಲ್ಲಿ ಸುಮಾರು 150 ಕಂಪನಿಗಳು dormant ಆಗಿವೆ. ಅದರಲ್ಲಿ ಕೆಲವು active ಆಗಿವೆ. ತಾವು ಇವತ್ತಿನ ದಿವಸ ಇದನ್ನು ಸ್ಪಷ್ಟವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಮುಂದೆ ನಾನು ಓದುತ್ತೇನೆ. ಅದೇನೆಂದರೆ, "The lessee OMC has encroached the forest land and also the major area of M/s. Hind Traders" ಅಂದರೆ, ಇವರು forest area ಅಷ್ಟೆ encroach ಮಾಡಿಲ್ಲ. OMC ಯವರು Hind Traders ಕಂಪನಿಯವರ ಜಮೀನನ್ನು ಸಹ encroach ಮಾಡಿದ್ದಾರೆ ಎನ್ನುವ ವರದಿ ಸಹ ಬಂದಿದೆ. ಅಂದಾಗ, "It is learnt that the M/s. Hind Traders mine is given on raising contract to OMC. This is a serious issue and it will jeopardize the interest of the state." ಅಂದರೆ, ರಾಜ್ಯದ ಹಿತವನ್ನು ಬದಿಗಿಟ್ಟು ಈ ಕೆಲಸ ನಡೆದಿದೆ. ಅದಕ್ಕೆ ಇವತ್ತು ಈ issue ಬಹಳ ಮುಖ್ಯವಾದ್ದದು ಎಂದು ಲೋಕಾಯುಕ್ತದವರು ಹೇಳಿದ್ದಾರೆ. ಮುಂದೆ ಅವರು ಏನು ಹೇಳುತ್ತಾರೆಂದರೆ "The actual encroachment by the OMC would be assessed after fixing the proper interstate border line. The mining is going on full swing inside the leased area of M/s. Hind Traders. The mine roads formed at interstate border are used to transport the iron ore on both sides (Andhra Pradesh as well as Karnataka). Due to road formation the interstate border line has been destroyed."

ಮಾನ್ಯ ಅಧ್ಯಕ್ಷರೆ, ಇವರು road formation ಮಾಡಿಕೊಂಡು, Photo ನಲ್ಲಿ ನಾವು ತೋರಿಸಿದಂತೆ cut off ಮಾಡಿಕೊಂಡು ಹೊಸ ರೋಡ್‌ನ್ನು ಆ ಕಡೆ formation ಮಾಡಿಕೊಂಡು, ಈ ಕಡೆ

ಹೋಗುವುದನ್ನು ಯಾರೂ ನೋಡದೇ ಇರುವಂತೆ ಮಾಡಿಕೊಂಡಿರುವುದನ್ನು ತೋರಿಸಿದ್ದಾರೆ ಅದಕ್ಕೆ ಅವರೂ ಸಹಾ ಒಪ್ಪಿಗೆಯನ್ನು ಕೊಟ್ಟಿದ್ದಾರೆ. "Due to road formation the interstate border line has been destroyed. The interstate boundary inside the Bellary RF is under dispute between two states. Hence it is suggested to get the border area surveyed from the Survey of India, the Central Government, ..." ನಾನು ಇಲ್ಲಿ ಇದನ್ನು ಏತಕ್ಕೆ ಓದಿದೆ ಎಂದರೆ, ನಾನು ಇದನ್ನು ಹೇಳಿದ ತಕ್ಷಣ ತಾವು ತಮ್ಮ ಗಮನವನ್ನು ಕೊಡುವುದಿಲ್ಲ. ನಾವು ಏನಾದರೂ ಹೇಳಿದರೆ, ರಾಜಕೀಯ ದುರುದ್ದೇಶದಿಂದ ಹೇಳುತ್ತೇವೆಂದು ಹೇಳುತ್ತೀರಿ. ಈಗ ಸತ್ಯಾಂಶ ಏನೆಂದರೆ, ಲೋಕಾಯುಕ್ತ ವರದಿ ತಮ್ಮ ಮುಂದೆ ಇದೆ. ಅದರಲ್ಲಿ ಸ್ಪಷ್ಟವಾಗಿ ನೇರವಾಗಿ allegation ಮಾಡಿದ್ದಾರೆ. ಅದೇನೆಂದರೆ, Inter-State Border ನಲ್ಲಿ ಮೈನಿಂಗ್ ನಡೆದಿದೆ. Forest Land encroach ಆಗಿದೆ. Hind traders ನವರದ್ದು encroach ಆಗಿದೆ. ಸಣ್ಣ ಪುಟ್ಟ ಜನ ಯಾರು ಹೆದರಿಕೆಗೆ ಒಳಗಾಗುತ್ತಾರೋ, ಯಾರು ನಮಗೇಕೆ ಈ ಕಿರಿಕಿರಿ ಎಂದು surrender ಆಗುತ್ತಾರೋ, ಅಂತಹವರು ಎಲ್ಲರೂ ಸಹ ಈ ಸಿ.ಬಿ.ಐ ವಿಚಾರಣೆಯಲ್ಲಿ ಬರುತ್ತಾರೆ. ಒಂದು ಕಂಪನಿಗೆ ಸರ್ಕಾರ ಬೆಂಬಲ ಕೊಡುವಾಗ ಮಾನ್ಯ ಮುಖ್ಯಮಂತ್ರಿಗಳೇ ನಿಂತು open ಆಗಿ ಅವರು ಯಾವುದೂ ಮಾಡಿಲ್ಲ. ಅದು ಸತ್ಯಕ್ಕೆ ದೂರವಾದದ್ದು ಎಂದು ಅವರೇ ಎದೆ ತಟ್ಟಿ ಹೇಳುವಾಗ, ಯಾವ ordinary mining lease-holder ಇವರ ಮುಂದೆ ಬಂದು ಹೇಳುವುದಕ್ಕಾಗುತ್ತದೆ? ಇವರು ಕುರುಡರಾಗಿದ್ದಾರೆ. ನಾವು ಹೇಳಿದರೆ ನೀವು ಕೇಳುವುದಿಲ್ಲ. ಕಣ್ಣು ಕುರುಡು, ಕಿವಿ ಕೇಳುವುದಿಲ್ಲ ಅಂದ ಮೇಲೆ ನಾವು ಯಾವ ಸರ್ಕಾರದ ಮುಂದೆ ಹೋಗಬೇಕು? ಅವರು ಕಿವಿ, ಕಣ್ಣು ಮುಚ್ಚಿಕೊಂಡಿದ್ದಾರೆ. ಬಾಯಿಯಲ್ಲಿ ಮಾತ್ರ ಏನು ಬೇಕೋ ಅದನ್ನು ಹೇಳಿಕೊಂಡು ಹೋಗುತ್ತಿದ್ದಾರೆ. ಅದಕ್ಕೆ ತಾವು ಈ ವರದಿಯ ಮೇಲೆ act ಮಾಡಬೇಕು. ಹೌದಾ? ಸರ್ಕಾರದ ಮೇಲೆಯೇ ಆಪಾದನೆ ಇರುವಾಗ ಸರ್ಕಾರವೇ ವಿಚಾರಣೆ ಮಾಡುವುದಕ್ಕಾಗುವುದಿಲ್ಲ. ನೀವು ಸಿ.ಬಿ.ಐ ಗೆ refer ಮಾಡಿ. ನೀವಂತೂ ಇದರಲ್ಲಿ involve ಆಗಿಲ್ಲ. ನಾವು ಯಾವುದರಲ್ಲೂ ಸಹ ಹೋಗಿಲ್ಲ. ಎಲ್ಲಾ ಹಿಂದಿನ ಸರ್ಕಾರಗಳು ಲೂಟಿ ಹೊಡೆದವು. ನಮ್ಮ ಕಾಲದಲ್ಲಿ ಆಗಿಲ್ಲ. ಇದು ನೂರಾರು ವರ್ಷಗಳಿಂದ ಆಗಿದೆ ಎಂದು ತಾವು

ಏನು ಹೇಳಿದಿರಿ, ಆ 35 -40 ವರ್ಷಗಳಲ್ಲಿ ಯಾರ್‍ಯಾರು ಏನೇನು ತಿಂದಿದ್ದಾರೆ, ಏನೇನು ಲೂಟಿ ಹೊಡೆದಿದ್ದಾರೆ ಎನ್ನುವುದೆಲ್ಲಾ ಹೊರಗಡೆ ಬರಲಿ. ಲೋಕಾಯುಕ್ತ ವರದಿ ಪ್ರಕಾರ ಸಹ ಇವತ್ತು ಯಾರ್‍ಯಾರು Border area encroach ಮಾಡಿದ್ದಾರೆ. ಅದೂ ಬರಲಿ. ತಾವು ಹೇಳಿದಿರಿ Emotionally ಅನೇಕ ಸಾರಿ ನಮ್ಮ ಮುಖ್ಯಮಂತ್ರಿಗಳು react ಮಾಡುತ್ತಾರೆ. ಇಲ್ಲಿ ಒಂದು cartoon ಬಂದಿದೆ ತಾವು ನೋಡಿರಬಹುದು. ಆ cartoon ನಲ್ಲಿ ಏನಿದೆ ಅಂದರೆ, ಒಂದು ಇಂಚು ಭೂಮಿ ಸಹ ಕರ್ನಾಟಕದಿಂದ ಕೊಡುವುದಿಲ್ಲ ಎಂದು ಹೇಳಿದ್ದಾರೆ. ಮಹಾರಾಷ್ಟ್ರ ಚಳುವಳಿ ನಡೆದಾಗ, ಆದರೆ, ಆಂಧ್ರದವರಿಗೆ ಕೊಡುವುದಿಲ್ಲವೆಂದು ಹೇಳಲಿಲ್ಲ.

ಶ್ರೀ ಜನಾರ್ದನ ರೆಡ್ಡಿ (ಮಾನ್ಯ ಪ್ರವಾಸೋದ್ಯಮ ಸಚಿವರು) :- ಆ ಪತ್ರಿಕೆ ಮೇಲೆ ನಾವು ಮಾನ ನಷ್ಟ ಮೊಕದ್ದಮೆ ಸಹ ಹಾಕಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- case ಹಾಕಬಹುದು. ಆದರೆ, ನೀವೇ appoint ಮಾಡಿದ್ದು. ಈ reportನಲ್ಲಿ ಇರುವುದನ್ನು ಹೇಳಲಿಲ್ಲವೆಂದರೆ, ಇನ್ನು ಯಾವ report ಅನ್ನು ಹೇಳಲಿ?

ಶ್ರೀ ಜಿ. ಜನಾರ್ದನ ರೆಡ್ಡಿ :- ಇವತ್ತು ಯಾವ ಪತ್ರಿಕೆಯನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಕಳುಹಿಸಿಕೊಟ್ಟಿದ್ದಾರೋ, ಆ ಪತ್ರಿಕೆ ಸಂಪೂರ್ಣವಾಗಿ ಲೋಕಾಯುಕ್ತರ ವರದಿಯನ್ನು ತಪ್ಪಾಗಿ ಪ್ರಕಟಿಸಿದೆ. ಲೋಕಾಯುಕ್ತರ ವರದಿ 1700 ಪುಟಗಳಷ್ಟಿದ್ದು, ಪ್ರತಿಯೊಬ್ಬ ಪತ್ರಕರ್ತರಿಗೂ ಸಿಗುವ public document ಆಗಿದೆ. ಅದರಲ್ಲಿ ಯು.ಬಿ.ಸಿಂಗ್‌ರವರು ಸ್ಪಷ್ಟವಾಗಿ ನಮ್ಮ ಓಬಳಾಪುರಂ ಮೈನಿಂಗ್ ಕಂಪನಿ ಒತ್ತುವರಿ ಮಾಡಿದೆಯೆಂದು ಹೇಳಿಲ್ಲ. ಎರಡನೆಯದು, ಸನ್ಮಾನ್ಯ ಲೋಕಾಯುಕ್ತರಾದ ಸಂತೋಷ್ ಹೆಗ್ಡೆಯವರು ಕೂಡ ಯಾವುದೇ ರೀತಿಯಲ್ಲಿ ಓಬಳಾಪುರಂ ಮೈನಿಂಗ್ ಕಂಪನಿಯವರು ಒತ್ತುವರಿ ಮಾಡಿದ್ದಾರೆ ಎಂಬುದನ್ನು ಸ್ಪಷ್ಟೀಕರಿಸಲು ಸಾಧ್ಯವಾಗುತ್ತಿಲ್ಲ, ಮತ್ತು ಎರಡೂ ರಾಜ್ಯಗಳು ಸೇರಿ ಕೇಂದ್ರ ಸರ್ಕಾರ ದೊಂದಿಗೆ ಸರ್ವೆ ನಡೆಸುವುದಾದರೆ ಇದನ್ನು ಬಗೆಹರಿಸಬಹುದು ಎನ್ನುವ ಅಭಿಪ್ರಾಯ ಕೊಟ್ಟಿದ್ದಾರೆ. ಪಾಪ! ತಾವು ಈ ಹಿಂದೆ ಸರ್ಕಾರದಲ್ಲಿದ್ದ ಅಧಿಕಾರಿಗಳು ಸೇಡು ತೀರಿಸಿಕೊಳ್ಳಲು ಏನು ರಿಪೋರ್ಟ್ ಮಾಡಿದ್ದರು ಅದನ್ನು ಓದಿರಬಹುದು. ಮಾನ್ಯ ಸಂತೋಷ್ ಹೆಗ್ಡೆಯವರು....

ಶ್ರೀ ಮಲ್ಲಿಕಾರ್ಜುನ ಖರ್ಗೆ :- If this is officers' report, I will withdraw.

ಶ್ರೀ ಜಿ. ಜನಾರ್ದನ ರೆಡ್ಡಿ :- ನಾಳೆ ಇದರ ಪ್ರತಿ ಮಾಧ್ಯಮದವರಿಗೆ ಸಿಗುತ್ತದೆ. ಮಾಧ್ಯಮದವರಿಗೆ ಎಲ್ಲಾ ಪ್ರತಿಗಳೂ ಸಿಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- If it is Lokayukta's officers' report then you will have to.

ಶ್ರೀ ಜಿ. ಜನಾರ್ದನ ರೆಡ್ಡಿ :- 1700 ಪುಟಗಳ ಲೋಕಾಯುಕ್ತರ ವರದಿ ಪ್ರತಿಯೊಬ್ಬ ಪತ್ರಕರ್ತರಿಗೆ ನಾನೇ ಜವಾಬ್ದಾರಿ ವಹಿಸಿ ಇಲ್ಲವೇ, ಅವರೇ ನೇರವಾಗಿ Right to Information Actನಡಿ ತೆಗೆದುಕೊಳ್ಳಲು ತೊಂದರೆ ಇಲ್ಲ. ಆದರೆ, ಆ ವರದಿಯಲ್ಲಿ ನಾವು ಒತ್ತುವರಿ ಮಾಡಿರುವ ಬಗ್ಗೆ, ನಮ್ಮ ಬಗ್ಗೆ, ನಮ್ಮ ಸಂಸ್ಥೆಯ ಹೆಸರಿನ ಬಗ್ಗೆಯಾಗಲಿ, ಮತ್ತೊಂದು ಇರಲಿ, ಇಲ್ಲಿರುವ ಮಾಧ್ಯಮದವರು ಇಡೀ ರಾಜ್ಯಕ್ಕೆ ತಿಳಿಸುತ್ತಾರೆ. ಯಾವುದೋ ಒಂದು ಪತ್ರಿಕೆ ಇಂದು ತಪ್ಪು ಮಾಹಿತಿ ಪ್ರಕಟಿಸಿ ಕಾರ್ಟೂನ್ ಹಾಕಿದರು, ಅಥವಾ ಇನ್ನೊಂದು ಮಾಡಿದರು. ಅದರ ಮೇಲೆ ನಾವು ಡಿಫಮೇಶನ್ ಕೇಸ್ ಫೈಲ್ ಮಾಡಲು ಎಲ್ಲ ಸಿದ್ಧತೆಗಳಾಗಿದೆ.

ಶ್ರೀ ಹೆಚ್.ಡಿ. ರೇವಣ್ಣ :- ಈ ರಾಜ್ಯದಲ್ಲಿ ಪತ್ರಿಕಾ ಸ್ವಾತಂತ್ರ್ಯ ಇರುತ್ತದೆ. ಅವರು ಏನಾದರೂ ಬರೆಯಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಈಗ ಜನಾರ್ದನ ರೆಡ್ಡಿಯವರು ಜರ್ನಲಿಸ್ಟ್ ಮತ್ತು ಜವಾಬ್ದಾರಿಯುತವಾಗಿ ಮಾತನಾಡುತ್ತಾರೆಂಬ ನಂಬಿಕೆ ನನಗಿದೆ. ಆದರೆ, ಏಕೋ ನನ್ನ ನಂಬಿಕೆಯನ್ನು ಅವರು ಹುಸಿಗೊಳಿಸುತ್ತಿದ್ದಾರೆ. Annexure, A ಇದು letter ಅಲ್ಲ ಲೋಕಾಯುಕ್ತ ವರದಿಯ ಅನುಬಂಧ-A, ಅನಂತರ, ಪುಟ ಸಂಖ್ಯೆ 126, ತಮ್ಮಲ್ಲಿದ್ದರೆ ತೆಗೆದು ನೋಡಿ. I once again read it. ತಮ್ಮ ಗಮನಕ್ಕೆ ಮತ್ತು ಸದನದ ಗಮನಕ್ಕೆ ನಾನು ಇನ್ನೊಮ್ಮೆ ತರಬಯಸುತ್ತೇನೆ. ಇದರಲ್ಲಿ ಏನಾದರೂ ತಪ್ಪಾದರೆ ತಾವು ಕ್ಷಮಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಇನ್ನೊಮ್ಮೆ ಕೇಳಬೇಕು. ನನಗೆ ಬರುವ ಇಂಗ್ಲಿಷ್‌ನಲ್ಲಿ ಸ್ಪಷ್ಟವಾಗಿ ಓದುತ್ತೇನೆ. ಅರ್ಥವಾಗುವುದು ಸ್ವಲ್ಪ ಹೆಚ್ಚು ಕಡಿಮೆಯಾದರೂ ಕ್ಷಮಿಸಬೇಕು. ಆದರೆ, ಇದರಲ್ಲಿ ಏನು ಬರೆದಿದ್ದಾರೆ ಎಂದು ನಾವೆಲ್ಲ ಸಾರಾಂಶ ತಿಳಿದುಕೊಳ್ಳಬೇಕು. ನಾನು ಪ್ರತಿಯೊಂದನ್ನೂ ಇಂಟರ್‌ಪ್ರಿಟೇಷನ್ ಮಾಡಿ, ಪ್ರತಿಯೊಂದನ್ನೂ word by

word interpret ಮಾಡುವುದಿಲ್ಲ. ನಮ್ಮ ಹತ್ತಿರ ಇರುವ ವರದಿ ಏನಿದೆ, ಲೋಕಾಯುಕ್ತದವರು ಪ್ರತಿ ಕೊಟ್ಟಿದ್ದಾರೋ ಅದನ್ನು ನಾನು ತಂದಿದ್ದೇನೆ. ಅದರ ಆಧಾರದ ಮೇಲೆ ನಾನು ಹೇಳುತ್ತಿದ್ದೇನೆ.

"The GTS points at Sugguammagudda Hillock (Andhra Pradesh and Timmappanna gudda Hillock (Karnataka) have been destroyed during the course of mining. M/s. Obalapuram Mining Company (P) Ltd. (OMC Andhra Pradesh has started the mining operation in 2007-08. In the process of mining, the lessee or raising contractor have crossed the interstate border by forming network of roads to link with the mine pit heads of M/s. Hind Traders. (HT) The M/s. HT once complained that M/s. OMC is extracting the iron ore from his lease illegally. These mine roads are formed by crossing the interstate border and to that extent the lessee (OMC) has encroached the forest and also the leased area of M/s. Hind Traders. It is learnt that the M/s. Hind Traders mine is given on raising contract to OMC. This is a serious issue and it will jeopardize the interest of the state. The actual encroachment by the OMC would be assessed after fixing the proper interstate border line." ಎಂದು ಮುಂದೆ ಹೇಳುತ್ತಾರೆ, ಅಂದರೆ it is a fact. ರಸ್ತೆ ಆಗಿದ್ದು, ಅಲ್ಲಿರುವ ಕಲ್ಲುಗಳನ್ನು destroy ಮಾಡಿದ್ದು, ಪಿಲ್ಲರ್ ಅನ್ನು destroy ಮಾಡಿದ್ದು ಎಲ್ಲವೂ facts. All these are facts. ಅದಕ್ಕೆ ಅವರು ಹೇಳಿದ್ದು. Inter-State Dispute

ಇದ್ದಾಗ ಅದಕ್ಕೋಸ್ಕರವೇ ಸರ್ವೆ ಮಾಡಿಸಿ ಎಂದು ಬರೆದಿದ್ದಾರೆ. But the fact remains, Nobody can deny ಅಲ್ಲಿರುವ ಸಿಮೆಂಟ್ ಪಿಲ್ಲರನ್ನು destroy ಮಾಡಿದ್ದನ್ನು, ರೋಡ್ ಮಾಡಿದ್ದನ್ನು ಯಾರೂ deny ಮಾಡುವುದಿಲ್ಲ. Illegal ಆಗಿ Forest ಮತ್ತು Hind Traders ನಿಂದ Raising Contract ಮಾಡಿ ಎರಡನ್ನೂ ಜೋಡಿಸಿ ತೆಗೆದುಕೊಂಡಿದ್ದನ್ನು ಯಾರೂ deny ಮಾಡುವುದಿಲ್ಲ. ಇದಕ್ಕೆ ಪುನಃ ಸಂತೋಷ್ ಹೆಗ್ಡೆಯವರೇ, "ನನ್ನ ರಿಪೋರ್ಟ್ ಸರಿಯಲ್ಲಖವೆಂದೂ, ಈಗ ಹೇಗೆ rejoinder ಅಧಿಕಾರಿಗಳಿಂದ ಬಂತು, ಹಾಗೆಯೇ ಅವರಿಂದ ಏನಾದರೂ rejoinder ಬಂದರೆ, ಪುನಃ ನಾವು ನಿಮ್ಮ ಮುಂದೆ rejoinder ಬಂದಿದೆ. ಆ ಕಾಲದಲ್ಲಿ ರಿಪೋರ್ಟ್ ಹಾಗಿತ್ತು ಎಂದು ಹೇಳಿದರೂ ಹೇಳಬಹುದು. But, this is the fact, this is the report ಅದು ನಿಮ್ಮ ಮುಂದಿದೆ. ಇದನ್ನು ಸರಿಪಡಿಸುವುದಕ್ಕೋಸ್ಕರ, ಈ ಆಪಾದನೆಯಿಂದ ತಪ್ಪಿಸಿಕೊಳ್ಳುವುದಕ್ಕೋಸ್ಕರ ಹೊಸ ರಿಪೋರ್ಟ್ ತಯಾರಿಸುತ್ತಿದ್ದಾರೆ. ಅದು ತಯಾರಾಗಿಲ್ಲ ಎನ್ನುವುದನ್ನು ಅವರು ಹೇಳುತ್ತಾರೆ. ನಮ್ಮಲ್ಲಿ ಬಂದ ಮಾಹಿತಿ ಪ್ರಕಾರ, ಪತ್ರಿಕಾ ಹೇಳಿಕೆ ಪ್ರಕಾರ ಮತ್ತು ಇವತ್ತು ಪುನಃ The Hindu ಪತ್ರಿಕೆಯಲ್ಲಿ ರಿಪೀಟ್ ಆದ ಕಾರಣ ನಾನು ಹೇಳಬೇಕಾಗುತ್ತದೆ.

ಇವತ್ತಿನ ದಿವಸ ಈ ಕೇಸ್ ಅನ್ನು CBIಗೆ ನೀವು ರೆಫರ್ ಮಾಡಿ. ಅನಂತರ ಎಲ್ಲವೂ ಹೊರಗಡೆ ಬರುತ್ತದೆ. ಏಕೆಂದರೆ, ಇದರಲ್ಲಿ ಪ್ರಮುಖವಾಗಿ ತಾವೇ ಆಪಾದನೆ ಮಾಡಿದಂತೆ ಹಿಂದಿನ ಸರ್ಕಾರಗಳು involve ಆಗಿವೆ ಎಂದು ಹೇಳುತ್ತಿದ್ದೀರಿ. ಹಿಂದಿನ ಸರ್ಕಾರದ ಮುಖ್ಯಮಂತ್ರಿಗಳು, ಮಾಜಿ ಮುಖ್ಯಮಂತ್ರಿಗಳು ಯಾರೇ ಇರಲಿ. ಏಕೆಂದರೆ, ಅವರು High Court direction ಮೇಲೆ ನಾವು ಕೊಟ್ಟಿದ್ದೇವೆ ಎನ್ನುವುದನ್ನು ಪತ್ರಿಕೆಗಳಲ್ಲಿ ಓದಿದ್ದೇವೆ. ಆನಂತರ, ಇಲ್ಲಿ ಕಳುಹಿಸಿದ ಬಳಿಕ ಅಲ್ಲಿ ಕೊಟ್ಟಿದ್ದು, ತೆಗೆದುಕೊಂಡಿದ್ದು, Central Governmentನಿಂದ approval ಆಗಿದ್ದು, ಅದು ನಿಮಗೇ ಗೊತ್ತು. ಅದಕ್ಕೆ ಯಾರೇ ಇರಲಿ, ಹಿಂದಿನ ಮುಖ್ಯಮಂತ್ರಿಗಳೇ ಇರಲಿ, ಮಂತ್ರಿಗಳೇ ಇರಲಿ, ಅಧಿಕಾರಿಗಳೇ ಇರಲಿ ಮತ್ತು ಇವತ್ತಿನ ಅಧಿಕಾರಿಗಳೇ ಇರಲಿ ಅಥವಾ ನಿಮ್ಮ ಯಾವುದೇ traders ಇರಲಿ, ನಿಮ್ಮ ಪಕ್ಷದ ಮಂತ್ರಿಗಳೇ ಇರಲಿ, ವ್ಯಾಪಾರಸ್ಥರೇ ಇರಲಿ, ಯಾರೇ ಇರಲಿ, ನಿಷ್ಪಕ್ಷಪಾತವಾಗಿ enquiry ಆಗಬೇಕೆಂದರೆ, ನೀವು CBIಗೆ ವಹಿಸಿಕೊಡಬೇಕು. ನಿಮ್ಮಿಂದ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ನಿಮ್ಮವರೇ ನಿಮಗೇ ಒಂದು ಹೇಳುತ್ತಾರೆ.

ನಾವು ಹೇಳುವುದನ್ನು ನೀವು ನಂಬುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ CBI enquiry ಒಂದೇ ದಾರಿ. ಅದಕ್ಕೋಸ್ಕರ, ದಯವಿಟ್ಟು ತಾವು ಇದನ್ನು CBI enquiryಗೆ ರೆಫರ್ ಮಾಡಿ. ನಾವು ಸಂಪೂರ್ಣವಾಗಿ ಸಹಕರಿಸೋಣ. ಲೋಕಾಯುಕ್ತರವರು ಹೇಳಿದಂತೆ encroachment ಹೇಗೆ ಆಗುತ್ತದೆ? Permitನಲ್ಲಿ encroachment ಹೇಗೆ ಆಗುತ್ತದೆ? Lease landನಲ್ಲಿ encroachment ಹೇಗೆ ಆಗುತ್ತದೆ? ಅದೇ ರೀತಿ ಪಟ್ಟಾ ಲ್ಯಾಂಡ್‌ನಲ್ಲಿ, ಫಾರೆಸ್ಟ್ ಲ್ಯಾಂಡ್‌ನಲ್ಲಿ encroachment ಹೇಗಾಗುತ್ತದೆ? ಒಂದು ಸಲ ಪಕ್ಕದವರಿಗೆ ಲೀಸ್ ಕೊಟ್ಟರೆ, ಇನ್ನೊಬ್ಬ ಯಾವ ರೀತಿ encroach ಮಾಡುತ್ತಾನೆ? ಇಂತಹ ಅನೇಕ ವಿಷಯಗಳನ್ನು ಅವರು ಪ್ರಸ್ತಾಪಿಸಿದ್ದಾರೆ. ಅವೆಲ್ಲದರ ಡೀಟೇಲ್ಸ್‌ಗೆ ಹೋಗಬೇಕಾದರೆ ಸಾಕಷ್ಟು ಸಮಯ ಹಿಡಿಯುತ್ತದೆ.

ಈಗಾಗಲೇ ಅನೇಕ ಸದಸ್ಯರು ಮಾತನಾಡಿ ಎಲ್ಲವನ್ನೂ ಪ್ರಸ್ತಾಪಿಸಿದ್ದಾರೆ. ಇವೆಲ್ಲವೂ ಇವತ್ತಿನ ದಿವಸ ಲೋಕಾಯುಕ್ತದವರು ಸಲ್ಲಿಸಿದ ರಿಪೋರ್ಟ್‌ನಲ್ಲಿದೆ. ಅದಕ್ಕೆ ಅವರು suggestions ಕೊಟ್ಟಿದ್ದಾರೆ, ಅದನ್ನು immediately mining ಅನ್ನು ಬ್ಯಾನ್ ಮಾಡುವುದಕ್ಕೆ ಏನಾಗಿದೆ? ಕರ್ನಾಟಕದಲ್ಲಿರುವವರಿಗೆ ಬ್ಯಾನ್ ಮಾಡಿದರೆ, ಆಂಧ್ರಪ್ರದೇಶದಲ್ಲಿರುವವರಿಗೆ ಬ್ಯಾನ್ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಅವರು ಇಲ್ಲಿಂದ ಹೋಗಿ ಎಲ್ಲಾ ಮಾಡಿಕೊಂಡು ರಸ್ತೆ ಮಾಡಿಕೊಂಡು ನಮ್ಮಲ್ಲಿ encroachment ಮಾಡಿದರೂ ಇವತ್ತಿನ ದಿವಸ ನೀವು ಅವರನ್ನು ಹಿಡಿಯುವಂತಿಲ್ಲ. ಅದಕ್ಕೋಸ್ಕರವೇ ಜನಾರ್ದನ ರೆಡ್ಡಿಯವರು ಪದೇ ಪದೇ ಹೇಳುವುದು. ಏಕೆಂದರೆ, ಅವರ ಬಂಡವಾಳವೆಲ್ಲ ಇರುವುದು ಆ ಕಡೆಯೇ. ಆದರೆ, ಹೊಡೆಯುವುದೆಲ್ಲವೂ ಈ ಕಡೆ. ಹೀಗಿರುವುದರಿಂದ, ಅವರಿಗೆ ಏನಾಗಿದೆಯೆಂದರೆ, ಯಾರು ಬರುತ್ತಾರೆ ನೋಡೋಣ ಎಂಬ ಧೈರ್ಯ ಬಂದಿದೆ. ಅದಕ್ಕೆ ಒಂದು ಇಂಚು ತೆಗೆದುಕೊಳ್ಳುವಂತಿಲ್ಲ ಎಂದು ಅವರು ಹೇಳಿದರು. ಆದರೆ, ನೀವು ಯೋಚನೆ ಮಾಡಿ. ಒಳ್ಳೆಯ ವ್ಯಾಪಾರ. ಅವರು ತೆಗೆದುಕೊಂಡಿದ್ದು 2007ರಲ್ಲಿ, 2008ಕ್ಕೆ ಮುಗಿಯಿತು. ಹೆಚ್ಚು ಕಡಿಮೆ 13 ತಿಂಗಳುಗಳಲ್ಲಿ ಒಂದೇ ಮೈನ್‌ನಿಂದ ಇಷ್ಟು ಚೆನ್ನಾಗಿ ಮಾಡಬೇಕೆಂದರೆ, ನೀವು ಲೆಕ್ಕ ಹಾಕಿ, ನಿಜವಾಗಿಯೂ they are experts in Mining, exporting business. ಅದಕ್ಕೋಸ್ಕರ ಎಲ್ಲವೂ ಕೂಡ ಹೊರಗಡೆ ಬರುತ್ತದೆ, ನಮ್ಮ ಮೇಲೆ ಆಪಾದನೆ ಮಾಡಿದ್ದು, ಕಾಂಗ್ರೆಸ್‌ನವರು ಏನು ತಿಂದಿದ್ದಾರೆ, ಅದೂ ಹೊರಗಡೆ ಬರುತ್ತದೆ, ಜೆಡಿ(ಎಸ್)ನವರು ತಿಂದಿದ್ದೂ ಹೊರಗಡೆ

ಬರುತ್ತದೆ. ಪ್ರತ್ಯಕ್ಷ, ಅಪ್ರತ್ಯಕ್ಷವಾಗಿ ತಿಂದಿದ್ದಾರೋ, ಇಲ್ಲವೋ ಅದೂ ಹೊರಗಡೆ ಬರುತ್ತದೆ. ಅದನ್ನೂ ನೋಡೋಣ. ಆದುದರಿಂದ ಇದನ್ನು ಸಿ.ಬಿ.ಐ.ಗೆ ವಹಿಸಿ ಎಂದು ಕೇಳುತ್ತಿದ್ದೇವೆ. ಅನಧಿಕೃತ ಗಣಿಗಾರಿಕೆಯನ್ನು ಬಂದ್ ಮಾಡಿ. ಅದರ ನೋಂದಣಿಯನ್ನು ನಿಲ್ಲಿಸಿ. ವಿಶೇಷವಾಗಿ ಇದಕ್ಕೆ ಒಂದು ಕಾನೂನನ್ನು ಮಾಡಿ ಕೊನೆಯ ಪಕ್ಷ ನಮ್ಮ ರಾಜ್ಯದ ಗಣಿಗಳನ್ನು ಪ್ರೊಟೆಕ್ಟ್ ಮಾಡಿಕೊಳ್ಳುವ ಕೆಲಸ ಮಾಡೋಣ. ಅನಧಿಕೃತವಾಗಿ ಯಾರೆ ಮಾಡಿದರು ಕೂಡ ಅವರಿಗೆ ಪಾಠ ಕಲಿಸತಕ್ಕ ಕೆಲಸ ಮಾಡಿದಂತಾಗುತ್ತದೆ. ಸ್ಟೀಲ್ ಕೈಗಾರಿಕೆ ಮಾಡುವವರು ಇರುತ್ತಾರೆ, ಬೇರೆ ಬೇರೆ ಕೈಗಾರಿಕೆಗಳು ಇರುತ್ತವೆ. ಅವೆಲ್ಲವನ್ನು ನಿಲ್ಲಿಸಬೇಕೆಂದು ನಾವು ಹೇಳುವುದಿಲ್ಲ. ನಮಗೆ ಕಚ್ಚಾ ಸಾಮಗ್ರಿ ಬೇಕು ಎಂದರೆ ಇಲ್ಲಿಂದ ಕೊಡಿ. ಆಗ ನಮ್ಮವರಿಗೂ ನೌಕರಿ ಸಿಗುತ್ತದೆ. ನಮ್ಮಲ್ಲಿ ಕೈಗಾರಿಕೆಗಳಾಯಿತು ಎಂದರೆ ಅನೇಕ ನೌಕರಿಗಳು ಬರುತ್ತವೆ. ಆದರೆ, ಗುಡ್ಡವನ್ನು ಕಡಿದು ಕಡಿದು ಕೇವಲ ಮಣ್ಣನ್ನು ಮಾರಿಕೊಂಡರೆ ಸರ್ಕಾರಕ್ಕೂ ಆದಾಯ ಇಲ್ಲ, employment generate ಆಗುವುದಿಲ್ಲ. ಈ ರೀತಿ ಇದ್ದಾಗ ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛಪಡುತ್ತೇನೆ. ಸಿ.ಬಿ.ಐ. ವಿಚಾರಣೆಗೆ ತಾವು ಒಪ್ಪಬೇಕು. ಎರಡನೆಯದಾಗಿ ನೇರವಾಗಿ ಓಬಳಾಪುರಂ ಮೈನ್ಸ್ ಒತ್ತುವರಿ ಮಾಡಿದೆ ಎನ್ನತಕ್ಕ ವರದಿಯನ್ನು ಸಂತೋಷ್ ಹೆಗ್ಡೆಯವರು ಇವತ್ತು ಕೊಟ್ಟಿದ್ದಾರೆ. ಅದರ ಆಧಾರದ ಮೇಲೆ till that enquiry is completed ಸಂಬಂಧಪಟ್ಟ ಸಚಿವರು ರಾಜೀನಾಮೆಯನ್ನು ಕೊಡಬೇಕು. ಏಕೆಂದರೆ ಅವರ influenceನ್ನು ಈ ವಿಚಾರಣೆಯ ಮೇಲೆ ಮಾಡುತ್ತಾರೆ. ಆದ್ದರಿಂದ ನಿಷ್ಪಕ್ಷಪಾತವಾಗಿ ತನಿಖೆಯಾಗಬೇಕೆಂದರೆ, ಅವರು ಅದಕ್ಕೆ ನಿರ್ದೇಶಕರು, ಅಧ್ಯಕ್ಷರು ಆಗಿರದಿದ್ದರೆ ರಾಜೀನಾಮೆಯನ್ನು ಕೇಳುತ್ತಿರಲಿಲ್ಲ. ಅವರು ಸ್ವತಃ ಅದಕ್ಕೆ ನಾನೇ ನಿರ್ದೇಶಕ, ನನ್ನದೇ ownership ಇದೆ, ಅದಕ್ಕೆ ನಾನೇ ಹೊಣೆಗಾರ, ಬೇರೆ ಯಾರೂ ಕೂಡ ಇಲ್ಲವೆಂದು he said proudly. ಆದ್ದರಿಂದ, encroachment ಆಗಿದೆಯೋ ಇಲ್ಲವೋ, ನಮ್ಮ borderನಲ್ಲಿ ಬಂದಿದ್ದಾರೋ ಇಲ್ಲವೊ ಎಂಬುದೆಲ್ಲ ಹೊರಕ್ಕೆ ಬರುತ್ತದೆ. ಅದು ಬರುವವರೆಗೆ ಅವರು ರಾಜೀನಾಮೆ ಕೊಡಬೇಕು, ಇದನ್ನು ಸಿ.ಬಿ.ಐ. ವಿಚಾರಣೆಗೆ ರೆಫರ್ ಮಾಡಿ. ಅದರ ವರದಿ ಬಂದ ಮೇಲೆ ನೀವು ಇವರನ್ನು ಬೇಕಾದರೆ ಉಪ ಮುಖ್ಯಮಂತ್ರಿಯನ್ನಾಗಿ ಮಾಡಿಕೊಳ್ಳಿ, ಇಲ್ಲದಿದ್ದರೆ ನಿಮ್ಮ ಜಾಗವನ್ನೇ ಅವರಿಗೆ ಕೊಟ್ಟುಬಿಡಿ. ಅದಕ್ಕೆ ನಮಗೇನೂ ಅಭ್ಯಂತರವಿಲ್ಲ. ಈ ಬೇಸಿಸ್ ಮೇಲೆ ಅವರು

ರಾಜೀನಾಮೆ ಕೊಟ್ಟು ವಿಶ್ರಾಂತಿ ಪಡೆದುಕೊಳ್ಳಲಿ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಪ್ಪುತ್ತಾರೆ. ಇಲ್ಲದಿದ್ದರೆ ನಿನ್ನೆಯವರೆಗೆ ಆ ವರದಿ ಎಲ್ಲಿದೆ, ಯಾರು ಹೇಳಿದ್ದಾರೆ, ಏಕೆ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದರು. ಆ ವಿಷಯವನ್ನು ಈ ವರದಿಯಲ್ಲಿ ನಾವು ತೋರಿಸಿದ್ದೇವೆ. ಹಿಂದೆ ಅವರಿಗೆ ಗೊತ್ತಿದೆ. ಅವರು ಆಗ ವಿಧಾನ ಸಭೆಯಲ್ಲಿ ಇದ್ದರೋ ಇಲ್ಲವೋ ಗೊತ್ತಿಲ್ಲ. ಚಿಕ್ಕಬಳ್ಳಾಪುರದ ಶಾಸಕರಾದ ರೇಣುಕಾರಾಜನ್ ಎಂಬುವವರು ಇದ್ದರು. ಅವರ ಯಜಮಾನ ಸಬ್ ಇನ್ಸ್ಪೆಕ್ಟರ್ ನೇಮಕಾತಿಗಾಗಿ ಐದು ಸಾವಿರ ರೂಪಾಯಿ ತೆಗೆದುಕೊಂಡಿದ್ದಾನೆಂದು ಅವರಿಗೆ ರಾಜೀನಾಮೆಯನ್ನು ವಿರೋಧ ಪಕ್ಷದವರು ಗಲಾಟೆ ಮಾಡಿ ಕೊಡಿಸಿದರು. ಎರಡನೆಯದು, ನಮ್ಮಲ್ಲಿ ಬಿ.ಶಿವಣ್ಣನವರ್ ಎಂದು ಮಂತ್ರಿಯಾಗಿದ್ದರು. ಆಗ ಲಾಟರಿ ಚೀಟಿ ಎತ್ತುತ್ತಿದ್ದರು. ರಯಾನ ಸುಲ್ತಾನ ಅವರು ಬಂದಿದ್ದಾರೆ, ಅವರು ಏನೋ ಕಂಪ್ಲೇಂಟ್ ಮಾಡಿದರು ಎಂದು ಪಾಪ ಅವರನ್ನು ಮಂತ್ರಿ ಪದವಿಯಿಂದ ತೆಗೆದರು. ಕಿತ್ತೂರ್ ಮನೆಯಲ್ಲಿ ಗೋವಾದಿಂದ ಯಾರೋ ಒಬ್ಬರು ಹುಚ್ಚು ಹೆಣ್ಣುಮಗಳು ಮನೆ ಸೇರಿ ಅವರ ವಿರುದ್ಧವೇನೋ ಬೈಯುತ್ತಿದ್ದಾಗ, ಅವರ ಮೇಲೆ ಆಪಾದನೆ ಮಾಡಿಸಿ ಅವರನ್ನು Home ministership ನಿಂದ ಕಿತ್ತು ಹಾಕಿದರು. ಇಂಥ ಉದಾಹರಣೆಗಳು ಕರ್ನಾಟಕದಲ್ಲಿ ಬೇಕಾದಷ್ಟು ಇದೆ. ಇಲ್ಲಿ ಕೋಟಿಗಟ್ಟಲೆ ಲೂಟಿಯಾದರೂ ಸಹ ಕಿವಿ, ಕಣ್ಣು ಮುಚ್ಚಿಕೊಂಡು ಕುಳಿತಿದ್ದೀರೆಂದರೆ ನಾವು ಏನು ಹೇಳೋಣ. ಅವರು ಏನೇ ಹೇಳಲಿ, ಅವರದು thick-skin ಅಂದರೆ ಈ ಸರ್ಕಾರಕ್ಕೆ ನೈತಿಕತೆ ಇಲ್ಲ. ಈ ಸರ್ಕಾರಕ್ಕೆ ಕಾನೂನಿನ ಬಗ್ಗೆ ಗೌರವ ಇಲ್ಲ.

ಒಬ್ಬ ಮಾನ್ಯ ಸದಸ್ಯರು :- ಇವರು 150 ಕೋಟಿಗೆ ಎಷ್ಟು ಸಲ ರಾಜೀನಾಮೆ ಕೊಟ್ಟಿದ್ದಾರೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಇಂಥ ಒಂದು ಪರಿಸ್ಥಿತಿ ಇದ್ದರೂ ಸಹ ಈ ಸರ್ಕಾರದಲ್ಲಿ ಜಗ್ಗುವವರು, ಬಗ್ಗುವವರು ಇಲ್ಲ. ಅವರು ಹೇಳಿದ್ದೇ ಸರಿ. ಎರಡನೆಯದು, ಇವತ್ತಿನ ದಿವಸ ಕುಮಾರಸ್ವಾಮಿಯವರು, ಚಂದ್ರಶೇಖರ್, ಅಡಿಷನಲ್ ಸಿವಿಲ್ ಜಡ್ಜ್, ಜೆ.ಎಂ.ಎಫ್.ಸಿ., ಬಳ್ಳಾರಿ..

ಉಪಾಧ್ಯಕ್ಷರು :- That is an appealable order. ಅವರು ಅಪೀಲ್ ಹೋಗಿರಬಹುದು. Dispute ಬಂದಿದ್ದು ಎಲ್ಲಿ ಎಂದರೆ ಕುಮಾರಸ್ವಾಮಿಯವರು ಫೈನ್ ಕಟ್ಟಿದ್ದಾರೆಂದು ಹೇಳಿದ ಮೇಲೆ, ಅವರು ಫೈನ್ ಕಟ್ಟಿಲ್ಲ

ಎಂದು ಹೇಳಿದರು. The appeal may be pending. ಈಗ ನಮ್ಮ ಕ್ರಿಮಿನಾಲಜಿ ಏನು ಹೇಳುತ್ತದೆ ಅಂದರೆ, "A person is deemed to be not guilty until and unless his guilt is proved".

ಶ್ರೀ ಮಲ್ಲಿಕಾರ್ಜುನ ಖರ್ಗೆ :- I know that. ಅವರು ಈ ಮಾತನ್ನು ಮೊದಲೆ ಒಪ್ಪಿಕೊಳ್ಳಬಹುದಾಗಿತ್ತು. ಹೌದು ನನಗೆ ಕನ್‌ವಿಕ್ಷನ್ ಆಗಿದ್ದು ಸರಿ, ಆದರೆ, ನಾನು ಅಪೀಲ್ ಮಾಡಿ ಡಿಸ್‌ಮಿಸ್ ಮಾಡಿಸಿದ್ದೇನೆ ಎಂದು ಹೇಳಬಹುದಾಗಿತ್ತು. ಆದರೆ ಅವರು ಏನು ಚಾಲೆಂಜ್ ಮಾಡಿದರು, ನನಗೆ ಆ ಕೇಸು ಇನ್ನು stay ಇದೆಯೆಂದು. ಅಂದರೆ ನನಗೆ ಕನ್‌ವಿಕ್ಷನ್ ಆಗಿದ್ದರೆ ನಾನು ಇವತ್ತೇ ರಾಜೀನಾಮೆ ಕೊಡುತ್ತಿದ್ದೆ ಎಂದು ಹೇಳಿದರು.

ಉಪಾಧ್ಯಕ್ಷರು :- ಇಲ್ಲ. ಫೈನ್ ಕಟ್ಟಿದ್ದರೆ ರಾಜೀನಾಮೆ ಕೊಡುತ್ತಿದ್ದೆ ಎಂದು ಹೇಳಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾತಿನ ಭರದಲ್ಲಿ ನೀವು ಏನು ಬೇಕಾದರು ಹೇಳಿದರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನಾನು ಫೈನ್ ಕೊಟ್ಟಿದ್ದಾರೆಂದು ಹೇಳಿದೆನೋ ಅಥವಾ ಕೋರ್ಟ್‌ನಲ್ಲಿ ದಂಡ ಹಾಕಿದ್ದಾರೆಂದು ಹೇಳಿದೆನೋ, ದಯವಿಟ್ಟು ತೆಗೆಸಿ ನೋಡಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು :- ಇಲ್ಲಿ ಪೇಜ್ ನಂಬರ್ 101 ರಲ್ಲಿ "In this report of mine, I am not inclined to endorse those findings of Dr.Singh solely because..." ಈ ವರದಿಯಲ್ಲಿ ನಿಜವನ್ನೆಲ್ಲಾ ಮರೆಮಾಚಿ ಕೇವಲ ಕೆಲವು ಫೈಂಡಿಂಗ್ಸ್‌ನ್ನು ಮಾತ್ರ ನೀವು ಹೇಳಿದ್ದೀರಿ, ಎಲ್ಲ ಸತ್ಯವನ್ನು ಹೇಳಬೇಕಾಗಿತ್ತು. ಪೇಜ್ ನಂಬರ್ 101 ರಲ್ಲಿ ಲೋಕಾಯುಕ್ತದವರೇ ಹೇಳಿದ್ದಾರೆ.